# 46

# ಬೆಟ್ಟದ ತುದಿಗಳು ಮತ್ತು ಕಣಿವೆಗಳು

## ಓದುವ ಮನೆಪಾಠ #18

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).

H. ಹೆರೋದನ ಕ್ಷೇತ್ರದಿಂದ ಮತ್ತೊಮ್ಮೆ ತಪ್ಪಿಸಿಕೊಂಡದ್ದು.

1. ಗಲಿಲಾಯದಲ್ಲಿ ವಿರೋಧವಾದಾಗ - ತಿರುಗಿ ತಪ್ಪಿಸಿಕೊಂಡನು (ಮತ್ತಾಯ 15:39-16:12; ಮಾರ್ಕ 8:10-21).
2. ಬೇಥೆಸದಲ್ಲಿ ಒಬ್ಬ ಕುರುಡನು ಗುಣಹೊಂದಿದ್ದು (ಮಾರ್ಕ 8:22-26).
3. ಫಿಲಿಪ್ಪಿಯ ಕೈಸರೆಯಲ್ಲಿ ಒಂದು ಉತ್ತಮವಾದ ಅರಿಕೆ (ಮತ್ತಾಯ 16:13-20; ಮಾರ್ಕ 8:27-30; ಲೂಕ 9:18-21).
4. ಫಿಲಿಪ್ಪಿಯ ಕೈಸರೆಯಲ್ಲಿ ಯೇಸುವಿನ ಮರಣವನ್ನು ಮುಂತಿಳಿಸಿದ್ದು (ಮತ್ತಾಯ 16:21-28; ಮಾರ್ಕ 8:31-38; ಲೂಕ 9:22-27).
5. ಫಿಲಿಪ್ಪಿಯ ಕೈಸರೆಯಲ್ಲಿ (ಹೆರ್ಮೋನ್ ಪರ್ವತದಲ್ಲಿ) ಪ್ರಕಾಶಹೊಂದಿದ್ದು (ಮತ್ತಾಯ 17:1-13; ಮಾರ್ಕ 9:2-13; ಲೂಕ 9:28-36).

## ಪೀಠಿಕೆ

ಹಿಂದಿನ ಪಾಠದಲ್ಲಿ, ಯೇಸು ಗಲಿಲಾಯದಿಂದ ಹೊರಹೋಗುವ ಸರಣಿಯನ್ನು ಆರಂಭಿಸಿದ್ದನ್ನು ನಾವು ನೋಡಿದೆವು:[1] ಅದು ಗಲಿಲಾಯ ಸಮುದ್ರದ ಪಶ್ಚಿಮ ಭಾಗ ಮತ್ತು ತೂರ್ ಮತ್ತು ಫೌಯೋನಕದ ಸೀದೋನ್ ಪ್ರಾಂತಗಳಲ್ಲೂ ಸಹ. ಈ ಪಾಠದಲ್ಲಿ, ಕ್ರಿಸ್ತನ ಹಿಂದಿರುಗುವಿಕೆಯನ್ನು - ಈ ಸಾರಿ ಉತ್ತರಕ್ಕೆ ದೂರದಲ್ಲಿ, ಕೈಸರೀಯ ಪಿಲಿಪ್ಪಿಯ ಬೆಟ್ಟದ ಪ್ರಾಂತಗಳಿಗೆ ಹಿಂತಿರುಗುವುದನ್ನು ನಾವು ತಿರುಗಿ ನೋಡುತ್ತೇವೆ.

ಪ್ರತಿಯೊಂದು ಹಿಂತಿರುಗುವಿಕೆಯು ತನ್ನದೇ ಆದ ಪ್ರಮುಖಾಂಶಗಳನ್ನು ಹೊಂದಿದೆ. ಉದಾಹರಣೆಗೆ, ಆರಂಭದಲ್ಲಿ ಅವುಗಳಲ್ಲಿ ಒಂದು, ಕರ್ತನು ಐದು ಸಾವಿರ ಜನರಿಗೆ ಊಣಬಡಿಸಿದ್ದು ನಂತರದಲ್ಲಿ ನೀರಿನ ಮೇಲೆ ನಡೆದದ್ದು ಆಗಿದೆ. ಹೇಗೋ, ಇತರರಲ್ಲಿ ಯಾರೊಬ್ಬರೂ ಇಂತಹ ಅನೇಕ ಮಹತ್ತರವಾದ ಘಟನೆಗಳಲ್ಲಿ ಪಾಲ್ಗೊಂಡಿರಬಹುದು. ಒಂದು ವಾರದ ಅಂತರದಲ್ಲಿ ಈ ಘಟನೆಗಳು ಸಂಭವಿಸಿರಬಹುದು ಅವುಗಳು: ಮನಃಪೂರ್ವಕವಾದ ಅರಿಕೆ, ತನ್ನ ಸಭೆಯನ್ನು ಕಟ್ಟುವ ಯೋಜನೆಯ ಕುರಿತು ಕ್ರಿಸ್ತನ ಪ್ರಕಟಣೆ; ಯೇಸುವಿನ ಮರಣ, ಪುನರುತ್ಥಾನಕ್ಕೆ ಮತ್ತು ಎರಡನೆಯ ಬರುವಿಕೆ ಹಾಗೂ ರೂಪಾಂತರಕ್ಕೆ ಸಂಬಂಧಿಸಿದಂತೆ ಮೊದಲ ಸ್ಪಷ್ಟವಾದ ಮುನ್ಸೂಚನೆಯ ಉದ್ಘೋಷಣೆಗಳೇ ಆಗಿವೆ. ಈ ಸಮಯವು ಕರ್ತನಿಗೋಸ್ಕರ ವಿಶಿಷ್ಟವಾದದ್ದಾಗಿದ್ದು ಆತನ ಸೇವೆಗೆ ಒಂದು ತಿರುವಿನಂತಿರುವ ಪರಾಕಾಷ್ಟೆಯ ಸಂದರ್ಭ ಎಂದು ಅನೇಕ ವ್ಯಾಖ್ಯಾನಕಾರರು ಒಪ್ಪುವವ ರಾಗಿದ್ದಾರೆ.

ನಾನು ಈ ಪಾಠವನ್ನು "ಬೆಟ್ಟದ ತುದಿಗಳು ಮತ್ತು ಕಣಿವೆಗಳು" ಎಂದು ಕರೆಯುವವನಾಗಿದ್ದೇನೆ ಯಾಕೆಂದರೆ ಯೇಸುವಿಗಾಗಿ ಉತ್ಕಟವಾದ ಭಾವನೆಗಳ ಕಾಲವನ್ನು ಇದು ಹೊಂದಿರುವುದರಿಂದಲೇ (ನೋಡಿರಿ ಮಾರ್ಕ 8:12). ಒಬ್ಬ ಸಂಪೂರ್ಣ

ಮಾನವನಾಗಿದ್ದಂತಹ ಕ್ರಿಸ್ತನು "ಎಲ್ಲಾ ಸಂಗತಿಗಳಲ್ಲಿ" ನಮ್ಮಂತೆ ಅದನ್ನು (ಇಬ್ರಿಯ 2:17); ಆತನು ಉಲ್ಲಾಸಗೊಂಡನು (ಲೂಕ 10:21), ಮತ್ತು ಆತನು ದುಃಖಿತನಾದನು (ಲೂಕ 19:41; ಯೋಹಾನ 11:35). ಈ ಮಂಡನೆಯಲ್ಲಿ ಸಂಗತಿಗಳು ಪೂರ್ಣಗೊಳ್ಳುವಾಗ, ಯೇಸು ಹೃದಯ ಒಡೆಯುವಂತಹ ಕಣಿವೆಗೆದಿಂದ ಉಲ್ಲಾಸದಿಂದಿರುವ ಬೆಟ್ಟದ ತುದಿಗೆ ಹೋದನು, ನಂತರ ಆ ಕಣಿವೆಗೆ ಮತ್ತೆ ಹಿಂತಿರುಗಿದನು.

ನಮ್ಮ ಅಧ್ಯಯನದ ಕಾರ್ಯಕ್ರಮದಲ್ಲಿ, ನಾವು ನಮ್ಮ ಕರ್ತನ ಹೃದಯದ ಬಗ್ಗೆ ಕಲಿಯೋಣ. ನಾವು ನಮ್ಮ ಬಗ್ಗೆಯೂ ಸಹ ಕಲಿಯೋಣ.

## ಕಣಿವೆಯಲ್ಲಿ: ಯೇಸು ಉದ್ರೇಕಿಸಲ್ಪಟ್ಟದ್ದು

## (ಮತ್ತಾಯ 15:39-16:12; ಮಾರ್ಕ 8:10-21)

ನಮ್ಮ ಪಾಠದ ಆರಂಭದಲ್ಲಿ, ಯೇಸು ಈಗ ಮಾತ್ರ ಮಗ್ದಲ ಮತ್ತು ದಲ್ಮನೂಥ ಪ್ರಾಂತ್ಯದ - ಗಲಿಲಾಯಕ್ಕೆ ಮರಳಿದ್ದನು (ಮತ್ತಾಯ 15:39; ಮಾರ್ಕ 8:10). ಈ ಸ್ಥಳವು ಮಗ್ದಲ ಎಂಬ ಹಳ್ಳಿಯು ತಿಬೇರಿಯದ ಉತ್ತರದಲ್ಲಿ ನಾಲ್ಕು ಮೈಲಿಗಳ ಹತ್ತಿರದಲ್ಲಿರಬಹುದು.[2]

### ವೈರಿಗಳಿಂದ ಅಡ್ಡಿಪಡಿಸಲ್ಪಟ್ಟಿದ್ದು

ಕ್ರಿಸ್ತನು ಅಲ್ಲಿಗೆ ತಲುಪಿದಾಗ ಆತನ ಹಳೆಯ ವೈರಿಗಳಾದ, ಫರಿಸಾಯರು, ಕಾಣಿಸಿಕೊಂಡರು ಮತ್ತು "ಆತನೊಡನೆ ತರ್ಕಮಾಡತೊಡಗಿದರು" (ಮಾರ್ಕ 8:11), ವಿಚಿತ್ರವೆಂದರೆ, ಅವರು ಸದ್ದುಕಾಯರೊಡನೆ ಸೇರಿದ್ದರು (ಮತ್ತಾಯ 16:1). ನಮ್ಮ ಅಧ್ಯಯನಕ್ಕಿಂತ ಮುಂಚೆಯೇ ನಾವು ಸದ್ದುಕಾಯರ ಬಗ್ಗೆ ಮಾತನಾಡಿದ್ದೇವೆ,[3] ಆದರೆ ಸುವಾರ್ತೆಯ ವಿವರದಲ್ಲಿ ಇದೇ ಮೊದಲಬಾರಿ ಅವರು ಸೂಚಿಸಲ್ಪಟ್ಟಿದ್ದಾರೆ. ಸಾಮಾನ್ಯವಾಗಿ, ಫರಿಸಾಯರು ಮತ್ತು ಸದ್ದುಕಾಯರು ಮಾರಣಾಂತಕ ವೈರಿಗಳು ಆಗಿದ್ದರು; ಆದರೆ ಯೇಸುವು ಅವರನ್ನು ಭಯಗ್ರಸ್ತರನ್ನಾಗಿಸಿದ್ದಕ್ಕಾಗಿ, ಆತನನ್ನು ನಾಶಮಾಡುವದಕ್ಕಾಗಿ ಇಬ್ಬರೂ ಮೈತ್ರಿಯನ್ನು ಮಾಡಿಕೊಂಡರು.[4] ರಾಜಕೀಯದಂತೆ, ದ್ವೇಷವು, "ವಿಚಿತ್ರ ಜೊತೆಗಾರರನ್ನು ಮಾಡುತ್ತದೆ."[5]

ಈ ಸಂದರ್ಭದಲ್ಲಿ, ಈ ಮುಂಚೆ ಪ್ರಸ್ತಾಪಿಸಿದ ಸವಾಲನ್ನು ಫರಿಸಾಯರು ಪುನರಾವರ್ತಿಸಿದರು: ಅವರು ಯೇಸುವಿಗೆ "ಆತನನ್ನು ಪರೀಕ್ಷಿಸಲು ಆಕಾಶದಿಂದ ಯಾವುದಾದರೊಂದು ಸೂಚಕಕಾರ್ಯ"ವನ್ನು ತೋರಿಸಿ ಕೊಡಲೇಬೇಕೆಂದು ಕೇಳಿದರು (ಮಾರ್ಕ 8:11; ನೋಡಿ ಮತ್ತಾಯ 12:38-42; 16:1; ಯೋಹಾನ 2:18). ಕರ್ತನ ಸತ್ತವನನ್ನು ಎಬ್ಬಿಸಿದಂಥದ್ದನ್ನು ಒಳಗೊಂಡು ನೂರಾರು ಅದ್ಭುತಕಾರ್ಯಗಳನ್ನು ಮಾಡಿದ್ದರೂ, ಅವರಿಗೆ ನಿಜವಾಗಿಯೂ ಏನು ಬೇಕಾಗಿತ್ತು ಎಂಬುದನ್ನು ಹೇಳುವದು ಕಷ್ಟ ವಾಗಿತ್ತು. ಬಹುಶಃ "ಆಕಾಶದಿಂದ" ಮಾತುಗಳ ಚಿಹ್ನೆಯೂ ಅಲ್ಲಿರಬಹುದು.[6] "ಪರಲೋಕ" ಎಂಬುದಕ್ಕಿರುವ ಗ್ರೀಕ್ ಪದವು ಮತ್ತಾಯ 16:2, 3ರಲ್ಲಿ ಬಳಿಕೆಯಾಗಿದ್ದು ಅದು "ಆಕಾಶ" ಎಂಬರ್ಥವನ್ನು ಕೊಡುತ್ತದೆ. ಯೆಹೋಶುವನು ಮಾಡಿದ ಹಾಗೆ ಸೂರ್ಯ ಚಂದ್ರರನ್ನು ನಿಲ್ಲಿಸುವಂತೆ (ಯೆಹೋಶುವ 10:12, 13), ಎಲೀಯನು ಆಕಾಶದಿಂದ ಬೆಂಕಿಯನ್ನು ಕರೆದ ಹಾಗೆ (1 ಅರಸು 18:38), ಅಥವಾ ಅದಕ್ಕೆ ಸಮಾನವಾದುದ್ದನ್ನು ತೋರಿಸಿಕೊಡಬೇಕೆಂದು ಫರಿಸಾಯರು ಸವಾಲನ್ನು ಮಾಡುತ್ತಿರಬಹುದು.

ಮಾರ್ಕನ ಪ್ರಕಾರ, ಫರಿಸಾಯರು ಮತ್ತು ಸದ್ದುಕಾಯರ ಸಂಘರ್ಷವು ಕ್ರಿಸ್ತನನ್ನು "ಆತನ ಆತ್ಮನ ಆಳದಲ್ಲಿ" ವ್ಯಸನಪಡುವಂತೆ ಮಾಡಿತು (ಮಾರ್ಕ 8:12). ಅದ್ಭುತ ಕಾರ್ಯಗಳಿಲ್ಲದೆ, ಯಾವುದೇ ವಿಷಯವಿಲ್ಲದೆ ಅತ್ಯಾಶ್ಚರ್ಯಕರವಾಗಿ ಹೇಗೆ ಅವರನ್ನು ತೃಪ್ತಿಗೊಳಿಸಬೇಕು ಎಂದು ಆತನು ತಿಳಿದಿದ್ದನು.[7] ಒಬ್ಬ ಕುರುಡನು "ನೇರಳೆ ಬಣ್ಣವನ್ನು

ತೋರಿಸು ನಂತರವೇ ನಾನು ಅಲ್ಲೊಂದು ಅಂಥ ಬಣ್ಣವಿದೆ ಎಂದು ನಂಬುತ್ತೇನೆ" ಎಂದು ಹೇಳುವ ಹಾಗೆ ಅವರಿದ್ದರು. ಅವರ ಕಣ್ಣುಗಳು ಮುಚ್ಚಿದ್ದವು, ಅವರ ಹೃದಯವು ಕಠಿಣವಾಗಿತ್ತು; ಅವರಿಗೆ ಸಮಜಾಯಿಸುವ ಯಾವ ಮಾರ್ಗವೂ ಇರಲಿಲ್ಲ.

ಯೇಸು ಅವರಿಗೆ ಚುಟುಕಾದ ಉತ್ತರವನ್ನು ಕೊಟ್ಟನು. ಆಕಾಶವನ್ನು ನೋಡಿ ಯಾವ ರೀತಿಯ ಹವಾಮಾನವು ಇದೆ[8] ಎಂದು ಹೇಳಬಹುದುಲ್ಲವೆ ಎಂದು ಆತನು ಅವರಿಗೆ ಹೇಳಿದನು. ಹೇಗೋ, ಅವರ ಪೂರ್ವಾಗ್ರಹಪೀಡಿತ ಹೃದಯದ ಕಾರಣದಿಂದ, ಅವರು ಯೇಸುವನ್ನು ಮತ್ತು ಆತನ ಸೇವೆಯನ್ನು ಮತ್ತು ಆತನು ಯಾರು ಎಂದು ಅರ್ಥಮಾಡಿಕೊಳ್ಳುವುದನ್ನು ನೋಡುವಲ್ಲಿ ಅಸಮರ್ಥರಾಗಿದ್ದಾರೆ (ಮತ್ತಾಯ 16:2, 3).[9] "ಈ ಕೆಟ್ಟ ಸಂತತಿಯು ಸೂಚಕಕಾರ್ಯವನು ನೋಡಬೇಕೆಂದು ಅಪೇಕ್ಷಿಸುತ್ತದೆ; ಆದರೆ ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವದೂ ಇದಕ್ಕೆ ಸಿಕ್ಕುವುದಿಲ್ಲ" ಎಂದು ಮುಕ್ತಾಯಿಸಿದನು (ಮತ್ತಾಯ 16:4). ಇದು ಆತನ ದೈವತ್ವದ ಆತನ ಪುನರುತ್ಥಾನದ ಆಧಾರದ ಬಗೆಗೆ ಅಮೃತವಾದ ಆಧಾರವು ಆಗಿತ್ತು (ನೋಡಿ ರೋಮಾಪುರ 1:4). ಯೋನನು ಮೂರುದಿನ ದೊಡ್ಡ ಮೀನಿನಲ್ಲಿದ್ದಂತೆ, ಕ್ರಿಸ್ತನು ಮೂರು ದಿನ ಸಮಾಧಿಯಲ್ಲಿದ್ದನು (ಮತ್ತಾಯ 12:40).[10]

**ಸ್ನೇಹಿತರಿಂದ ನಿರಾಶೆಗೊಳಗಾದನು**

ಯೇಸು ಗಲಿಲಾಯದಲ್ಲಿ ಸಮಯವನ್ನು ಕಳೆಯಬೇಕೆಂದಿದ್ದರೆ ಆತನ ವೈರಿಗಳ ಕ್ಷಿಪ್ರವಾದ ಬರುವಿಕೆಯು ಅದನ್ನು ಅಸಾಧ್ಯ ಎಂದು ಹೇಳುತ್ತಿತ್ತು. ಒಮ್ಮೆಲೇ, "... ಅವರನ್ನು ಬಿಟ್ಟು ಹೋದನು" (ಮತ್ತಾಯ 16:4). ಶಿಷ್ಯರೊಂದಿಗೆ ದೋಣಿಯನ್ನು ಹತ್ತಿ, ತಿರುಗೊಂದಾವರ್ತಿ ಆತನು ಗಲಿಲಾಯ ಸಮುದ್ರದ ಪಶ್ಚಿಮ ದಿಕ್ಕಿಗೆ ಹೊರಟನು (ಮಾರ್ಕ 8:13) - ಈ ಸಾರಿ ಸಾಮಾನ್ಯವಾಗಿ ಬೆತ್ಸಾಯಿದದ ಸಮೀಪ ಪ್ರದೇಶದ ಕಡೆಗೆ ಹೋದನು.[11]

ಪ್ರಯಾಣದ ಆರಂಭದಲ್ಲಿ ಕ್ರಿಸ್ತನು "ಫರಿಸಾಯರ ಮತ್ತು ಸದ್ದುಕಾಯರ ಹುಳಿಹಿಟ್ಟಿನ ವಿಷಯದಲ್ಲಿ ಜಾಗರೂಕರಾಗಿರಿ" ಎಂದು ತನ್ನ ಶಿಷ್ಯರಿಗೆ ಎಚ್ಚರಿಕೆಯನ್ನು ಕೊಟ್ಟನು (ಮತ್ತಾಯ 16:6). ಆತನು "ಎಚ್ಚರಿಕೆ ... ಹೆರೋದನ[12] ಹುಳಿಹಿಟ್ಟಿನ ವಿಷಯದಲ್ಲಿ ... ಎಚ್ಚರಿಕೆ" ಎಂದೂ ಸಹ ಹೇಳಿದನು (ಮಾರ್ಕ 8:15). ಹೀಗಾಗಲೇ ಪರಿಸಾಯರೊಂದಿಗೆ ಕೂಡಿಕೊಂಡು ಉಪಾಯದಿಂದ ಯೇಸುವನ್ನು ಕೊಲ್ಲಬೇಕೆಂಬುದರ ಬಗ್ಗೆ ಆಲೋಚಿಸುತ್ತಿರುವಂತಹ ಹೆರೋದ್ಯರನ್ನು ಕುರಿತು ಸಹ ಎಚ್ಚರಿಕೆಯಿಂದಿರಬೇಕೆಂದು ಹೇಳಿದನು (ಮಾರ್ಕ 3:6).[13]

"ಹುಳಿಹಿಟ್ಟು" ಎಂಬ ಅಂಶವು ಪ್ರಭಾವವನ್ನು ಸೂಚಿಸಲು, ವಿಶೇಷವಾಗಿ ನಕಾರಾತ್ಮಕ ಪ್ರಭಾವವನ್ನು ಸೂಚಿಸಲು ದೇವರ ವಾಕ್ಯದಲ್ಲಿ ಬಳಸಲ್ಪಟ್ಟಿದೆ.[14] ಆತನನ್ನು ಮೆಸ್ಸಿಯನೆಂದು ಒಪ್ಪಿಕೊಳ್ಳುವುದಕ್ಕೆ ಈ ಗುಂಪಿನಿಂದ ಕಳಿಸಲ್ಪಟ್ಟವರೆಂಬ ಮೂಲ ಭಾವನೆಯನ್ನು ಬಹುಶಃ ಯೇಸು ಮನದಲ್ಲಿ ಇಟ್ಟುಕೊಂಡಿರಬಹುದು. ಶಿಷ್ಯರೂ ಕೂಡಾ ಮೆಸ್ಸಿಯ ಮತ್ತು ಆತನ ರಾಜ್ಯದ ಕಲ್ಪನೆಯ ಬಗೆಗೆ ತಮ್ಮದೇ ಆದ ಪೂರ್ವಾಗ್ರಹದೊಡನೆ ಹೋರಾಡುತ್ತಿದ್ದರು. "ಪೂರ್ವಾಗ್ರಹ ಕಲ್ಪನೆಯಿಂದ ಪ್ರಭಾವಿತರಾಗುವುದರಿಂದ ಎಚ್ಚರಿಕೆಯಾಗಿರ್ರಿ ಅದು ಸತ್ಯವನ್ನು ನೋಡುವುದರಿಂದ ನಿಮ್ಮನ್ನು ದೂರವಿರುಸುವುದಾಗಿದೆ" ಎಂಬ ಕರ್ತನ ಎಚ್ಚರಿಕೆಯು ಇದರ ವಿವರಣೆಯಾಗಿತ್ತು.

ಕ್ರಿಸ್ತನು ಏನು ಮಾತನಾಡುತ್ತಿದ್ದಾನೆ ಎಂಬ ಅರಿವು ಅಪೊಸ್ತಲರಿಗೆ ಇರಲಿಲ್ಲ "ಹುಳಿಹಿಟ್ಟು" ಎಂಬುದರ ಆಧಾರವು ಅವರಿಗೆ ಅದು ರೊಟ್ಟಿ ಎಂದು ಯೋಚಿಸುವಂತೆ ಮಾಡಿತು. ಯೇಸುವಿಗೆ ಹೊರಟುಹೋಗುವಿಕೆಯು ಬಲು ಬೇಗನೇ ಆಗಿದ್ದರಿಂದ ಅವರು ಹತ್ತಿರ ಕೇವಲ ಒಂದೇ ಒಂದು ರೊಟ್ಟಿ ಇತ್ತು (ಮಾರ್ಕ 8:14). ಪ್ರಯಾಣಕ್ಕಾಗಿ ಯೋಗ್ಯ ಸಿದ್ಧತೆಯನ್ನು ಮಾಡಿಕೊಳ್ಳದಿರುವುದಕ್ಕಾಗಿ ತಮ್ಮ ಗುರುವಿನ ಮಾತುಗಳು ತಮ್ಮನ್ನು ದಂಡಿಸುವಂತವುಗಳಾಗಿವೆ ಎಂದು ನಿರ್ಧರಿಸಿದರು (ಮತ್ತಾಯ 16:7; ಮಾರ್ಕ 8:16).

"ಅಲ್ಪವಿಶ್ವಾಸಿಗಳೇ" ಎಂದು ಅವರನ್ನು ಕರೆಯುತ್ತಾ, ಅವರ ತಿಳುವಳಿಕೆಯ ಕೊರತೆಯಿಂದ ಯೇಸು ವಿಚಲಿತನಾದನು (ಮತ್ತಾಯ 16:8). ಇತ್ತೀಚೆಗೆ ಆತನು ಐದುಸಾವಿರ ಜನರಿಗೆ ಊಣಬಡಿಸಿದ ಸ್ಥಳದ ಹತ್ತಿರದಲ್ಲಿಯೇ ಅವರಿದ್ದರು (ಲೂಕ 9:10-17), ಮತ್ತು ನಾಲ್ಕು ಸಾವಿರ ಜನರಿಗೆ ಉಣಬಡಿಸಿದ ಸ್ಥಳವೂ ಆ ಸ್ಥಳದಿಂದ ಬಹಳ ದೂರವೇನಿರಲಿಲ್ಲ (ಮಾರ್ಕ 7:31; 8:1-9).[15] ಅಲ್ಪ ಸಂಪನ್ಮೂಲದಿಂದ ಸಾವಿರಾರು ಜನರಿಗೆ ಆತನು ಊಣಪಡಿಸಿದ್ದೇ ಆದರೆ (ಮತ್ತಾಯ 16:9, 10), ಅವರ ಚಿಕ್ಕ ಗುಂಪಿಗೆ ಒಂದೇ ರೊಟ್ಟಿಯಿಂದ ಉಣಬಡಿಸುವುದರಲ್ಲಿ ಆತನಿಗೆ ಯಾದ ಸಮಸ್ಯೆಯೂ ಇರಲಿಲ್ಲ, ಆದರೆ ಅದನ್ನು ಆತನು ಮಾಡಲಿಲ್ಲ, ಆದ್ದರಿಂದ ಭೌತಿಕವಾದ ರೊಟ್ಟಿಯು ಅವರ ಮನದಲ್ಲಿ ಇತ್ತು. ಅಪೊಸ್ತಲರು ಕೊನೆಗೂ ಯೇಸು ಹೇಳಿದ್ದು "ಹಿಳಿಹಿಟ್ಟನ್ನು ಕುರಿತು ಎಚ್ಚರಿಕೆಯಾಗಿರಲು ಹೇಳಲಿಲ್ಲ; ಪರಿಸಾಯರ ಮತ್ತು ಸದ್ದುಕಾಯರ *ಬೋಧನೆಯನ್ನು* ಕುರಿತು ಎಚ್ಚರಿಕೆಯಾಗಿರಬೇಕೆಂದು ಹೇಳಿ ದನು ಎಂಬುದಾಗಿ ತಿಳಿದುಕೊಂಡರು" (ಮತ್ತಾಯ 16:12; ಒತ್ತಿ ಹೇಳಿದ್ದು ನನದು).

## ಕಣಿವೆಯಲ್ಲಿ: ಯೇಸು ಕರುಣಾಮಯಿ[16]
## (ಆದರೆ ...) (ಮಾರ್ಕ 8:22-26[17])

ಸಾಮಾನ್ಯವಾಗಿರುವಂತೆ, ಗಲಿಲಾಯವನ್ನು ಬಿಟ್ಟುಹೋಗುವಲ್ಲಿ ಕ್ರಿಸ್ತನು ವಿಭಿನ್ನವಾದ ಉದ್ದೇಶವನ್ನು ಹೊಂದಿದ್ದನು: ಆತನು ತನ್ನ ವೈರಿಗಳಿಂದ ದೂರವಿರಲು ಬಯಸಿದ್ದನು (ನೋಡಿ ಮತ್ತಾಯ 16:4; ಮಾರ್ಕ 8:13), ಆದರೆ ತನ್ನ ಶಿಷ್ಯರೊಡನೆ ಏಕಾಂತವಾಗಿ ಸಮಯವನ್ನು ಕಳೆಯಲು ಸಹ ಆತನು ಬಯಸಿದ್ದನು. ನಂತರದ ಆತನ ಉದ್ದೇಶವು ಆತನ ಮರಣವು ಸಮೀಪಿಸುತ್ತಿದ್ದಂತೆ ಹೆಚ್ಚಾದ ಮಹತ್ವವನ್ನು ಹೊಂದಿತು (ಮಾರ್ಕ 8:31). ಕಡಿಮೆ ಅಡೆತಡೆಗಳಿರುವಂತಹ ಉತ್ತರದ ಕೈಸರ ಪಿಲಿಪ್ಪಿಗೆ ಸಾಗಬೇಕೆಂದು ಆತನು ನಿರ್ಧರಿಸಿದನು.

ಆ ದಿಕ್ಕಿನಿಂದ ಅವರು ಪ್ರಾರಂಭಿಸಿ, "ಬೆತ್ಸಾಯಿದಕ್ಕೆ ಬಂದರು" (ಮಾರ್ಕ 8:22). ಈ ಬೆತ್ಸಾಯಿದ - ಜೂಲಿಯಸ್ ಸಮುದ್ರದ ಈಶಾನ್ಯದ ದಂಡೆಯ ಮೇಲಿದೆ.[18] ಅವರು ಪಟ್ಟಣವನ್ನು ತಲುಪಿದೊಡನೆ, ಜನರು ಸ್ವಸ್ಥಮಾಡಲೆಂದು "ಒಬ್ಬ ಕುರುಡನನ್ನು ಯೇಸುವಿನ ಬಳಿಗೆ ತಂದರು" (ವಚನ 22). ಕ್ರಿಸ್ತನು ಅವರ ಬಿನ್ನಹವನ್ನು ನಿರಾಕರಿಸಲಿಲ್ಲ. ಎಂದಿನಂತೆ, ಆತನು ಕರುಣೆ ಹೊಂದಿದವನಾದನು ಆದರೆ, ದೊಡ್ಡ ಸಮೂಹವು ಆತನನ್ನು ಹಿಂಬಾಲಿಸುತ್ತ ಅವರ ಪ್ರಯಾಣದಲ್ಲಿ ಅವರಿಗೆ ತಡೆಯನ್ನು ಉಂಟುಮಾಡುತ್ತಿದ್ದದರಿಂದ ಜನಜಂಗುಳಿ ಕೂಡುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಆತನು ಸಂಕಲ್ಪಿಸಿಕೊಂಡನು. ಸ್ವಸ್ಥಮಾಡುವುದಕ್ಕೆ ಮುಂಚೆ ಆತನು ಆ ಮನುಷ್ಯನನ್ನು ಊರಹೊರಗೆ ಕರಕೊಂಡು ಹೋದನು (ವಚನ 23), ಮತ್ತು ನಂತರ ಆತನನ್ನು ಯಾರಿಗೂ ಹೇಳದೆ ನೇರವಾಗಿ ಅವನ ಮನೆಗೆ ಆತನನ್ನು ಕಳುಹಿಸಿಬಿಟ್ಟನು (ವಚನ 26).

ಈ ತರದ ಸ್ವಸ್ಥವಾಗುವಿಕೆಯು ಅನೇಕ ಅಸಮಾನ್ಯವಾದ ಸಂಗತಿಗಳನ್ನು ಹೊಂದಿದ್ದವು. ಯೇಸು ಕೇವಲ ಕ್ವಚಿತ್ತಾಗಿ, ಕೆಲವರನ್ನು ಮುಟ್ಟಿ ಗುಣಪಡಿಸಿದನು. ಇನ್ನೊಂದು ಸಮಯದಲ್ಲಿ ಸ್ವಸ್ಥ ಮಾಡಲು ಉಗುಳನ್ನು ಬಳಸಿದನು (ಮಾರ್ಕ 7:33, 34). ಈ ಘಟನೆಯ ಬಲು ಅಸಮಾನ್ಯವಾದ ಅಂಶ ಎಂದರೆ, ಹೇಗೋ ಎರಡು ಹಂತಗಳಲ್ಲಿ ಮಾಡಲ್ಪಟ್ಟ ಒಂದೇ ಒಂದು ಅದ್ಭುತಕಾರ್ಯವು ಇದಾಗಿದೆ.[19] ಇದು ಶಿಷ್ಯರು ತಮ್ಮ ನಂಬಿಕೆ ಮತ್ತು ಅರಿತುಕೊಳ್ಳುವಿಕೆಯ ಜೊತೆ ಹೋರಾಡುತ್ತಿರುವ ಎರಡು ಕಥೆಗಳ ಮಧ್ಯೆ ಸಿಲುಕಿಹಾಕಿಕೊಂಡಿರುವುದರಿಂದ ನಂಬಿಕೆಯು ಒಂದೇ ಸಾರಿ ಬರುವುದಿಲ್ಲ, ಆದರೆ ಹಂತ ಹಂತವಾಗಿ ಬರುತ್ತದೆ ಎಂಬ ವಾಸ್ತವಿಕ ಪಾಠವನ್ನು ಇದು ಬೋಧಿಸುವಂಥದ್ದಾಗಿದೆ ಎಂದು ಸೂಚಿಸಲ್ಪಟ್ಟಿದೆ. ನಿಜವಾಗಿ ಯೇಸುವಿನ ಉದ್ದೇಶವು ಏನಾಗಿತ್ತು ಎಂದು ನಾವು ತಿಳಿಯುವ.

ಮುಟ್ಟುವಂತಹ, ಉಗುಳುವಂತಹ, ಮತ್ತು ಎರಡು ಹಂತದ ಅಂಶದ ಈ ಅದ್ಭುತಕಾರ್ಯವು ಕೂಡಾ ಪ್ರಾಸಂಗಿಕವಾಗಿದೆ ಎಂದು ನಾವು ವಿಷಯಗಳಲ್ಲಿ ನೋಡಿದ್ದೇವೆ. ಶಕ್ತಿಯು ಕಾರ್ಯವಿಧಾನವಾಗಿದೆಯೇ ಹೊರತು ವ್ಯಕ್ತಿಯಲಿಲ್ಲ ಎಂಬುದಕ್ಕಾಗಿ ಕ್ರಿಸ್ತನು ವಿವಿಧ ಪದ್ಧತಿಗಳನ್ನು ಬಳಸಿದನು.

## ಬೆಟ್ಟದ ತುದುಯ ಮೇಲೆ: ಯೇಸು ಉಲ್ಲಾಸಿಸಿದ್ದು

## (ಮತ್ತಾಯ 16:13-20; ಮಾರ್ಕ 8:27-30; ಲೂಕ 9:18-21)

ಬೆತ್ಸಾಯಿದ - ಜೂಯಲಿಸದಿಂದ, ಕ್ರಿಸ್ತನು ಮತ್ತು ಆತನ ಹಿಂಬಾಲಕರು ಅಂತಿಮವಾಗಿ ಕೈಸರೆಯ ಫಿಲಿಪ್ಪಿಯ ಪ್ರಾಂತ್ಯವನ್ನು ಸೇರುವ ತನಕ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ತಾನು ಯಾರು ಎಂಬುದನ್ನು ತನ್ನ ಅಪೊಸ್ತಲರು ನಿಜವಾಗಿಯೂ ಅಲಿತುಕೊಂಡಿ ದ್ದಾರೋ ಎಂಬುದನ್ನು ಪರೀಕ್ಷಿಸುವುದಕ್ಕೋಸ್ಕರ ಅವರನ್ನು ಪ್ರಶ್ನಿಸಿದನು. ಶಿಷ್ಯರಿಗೆ ಇದು ಪ್ರಮುಖವಾದ ಪ್ರಶ್ನೆಯಾಗಿತ್ತು.

### ಒಂದು ವಿಶೇಷ ಪರೀಕ್ಷೆ

ಯೇಸು ಪ್ರಾರ್ಥಿಸಿದ ನಂತರ (ಲೂಕ 9:18), ಆತನು ತನ್ನ ಶಿಷ್ಯರನ್ನು ಕರೆದು "ಜನರು ಮನುಷ್ಯಕುಮಾರನೆಂಬ ನನ್ನನ್ನು ಯಾರು ಅನ್ನುತ್ತಾರೆ" ಎಂದು ಕೇಳಿದನು (ಮತ್ತಾಯ 16:13). ಅವರು "ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ, ಕೆಲವರು ಎಲೀಯನು ಅನ್ನುತ್ತಾರೆ, ಬೇರೆ ಕೆಲವರು ಯೆರಮೀಯನು ಅನ್ನುತ್ತಾರೆ" ಎಂದು ಹೇಳಿದರು (ಮತ್ತಾಯ 16:14; ನೋಡಿರಿ ಮಾರ್ಕ 6:14-16; ಲೂಕ 9:7, 8).[20] ಇವರಲ್ಲಿ ಪ್ರತಿಯೊಬ್ಬರೂ ಶ್ರೇಷ್ಟ ಸೇವಕರಾದವರಾಗಿದ್ದರು. ಇದು ಒಂದು ದೂರಿನಂತೆ ಕಂಡಿತು ಆದರೆ ಇದು ಅದಲ್ಲ. ಇದೊಂದು ತಿರಸ್ಕಾರ: ಯೇಸು ಒಬ್ಬ ಮೆಸ್ಸಿಯನೆಂಬುದಕ್ಕಾಗಿ ತಿರಸ್ಕಾರವೇ ಆಗಿತ್ತು.

ನಂತರ ಯೇಸು ಎಲ್ಲಕ್ಕಿಂತ ಮಹತ್ವದ ಪ್ರಶ್ನೆಯನ್ನು ಕೇಳಿದನು "ಆದರೆ *ನೀವು* ನನ್ನನ್ನು ಯಾರನ್ನುತ್ತೀರಿ?" (ಮತ್ತಾಯ 16:15; ಒತ್ತಿ ಹೇಳಿದ್ದು ನನ್ನದು). ಆತನ ಅಪೊಸ್ತಲರು ಮೂಲತವಾಗಿ ಆತನನ್ನು ಹಿಂಬಾಲಿಸುವವರಾಗಿದ್ದರು ಯಾಕೆಂದರೆ ಆತನು ವಾಗ್ದಾತ್ತಾದ ಮೆಸ್ಸೀಯನು ಎಂದು ಅವರು ಯೋಚಿಸಿದ್ದರು (ಯೋಹಾನ 1:41, 49) - ಆದರೆ ಆತನು ಜಗತ್ತು ಬಯಸುವ ಅವಶ್ಯಕತೆಯನ್ನು ಪೂರೈಸುವ ಮೆಸ್ಸೀಯನು ಆತನಾಗಿರಲಿಲ್ಲ. ಒಂದು ಕ್ಷಣ ದೊಡ್ಡ ಗುಂಫು ಆತನನ್ನು ಹಿಂಬಾಲಿಸುತ್ತಿತ್ತು, ಆದರೆ ನಂತರದಲ್ಲಿ ಒಂದು ಚಿಕ್ಕ ಜನಪ್ರಿಯ ಅಭಿಪ್ರಾಯವು ಆತನ ವಿರುದ್ಧ ತಿರುಗಿತು (ಯೋಹಾನ 6:66). ಹೀಗಿದ್ದಾಗ್ಯೂ ಶಿಷ್ಯರು ಇನ್ನೂ ಆತನನ್ನು ನಂಬುವವರಾಗಿದ್ದಾರೆಯೇ? ಖಚಿತತೆಯು, ಬಂಡೆಯಷ್ಟು ಖಚಿತತೆ ಅವರಿಗಿದುದ್ದು ಅದು ಆತನು ಮೆಸ್ಸಿಯನೇ ಎಂಬುದೇ?

ಒಂದು ಉತ್ತಮ ಅಲಿಕೆಗೆ ಹೆಸರಾದ ಪೇತ್ರನು ಈಗ ಮಾತನಾಡಿದನು[21] "ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" (ಮತ್ತಾಯ 16:16). "ಕ್ರಿಸ್ತನು" ಇದರ ಗ್ರೀಕ್ ಅರ್ಥವು ಮೆಸ್ಸೀಯ ಎಂದಾಗಿದೆ. ಯೇಸು ಯೆಹೂದಿ ಜನಾಂಗವು ಎದುರು ನೋಡುತ್ತಿರುವಂಥವನು ಪ್ರವಾದಿಗಳಿಂದ ವಾಗ್ದತ್ತಾದವನು, ಎಂದು ಆತನು ನಿಶ್ಚಯವಾಗಿ ನಂಬುವಂತದ್ದರಲ್ಲಿ ದೃಢ ವಾಗಿದ್ದನು.

### ಒಂದು ವಿಶೇಷ ವಿವರಣೆ

ಯೇಸುವಿನ ಧ್ವನಿಯಲ್ಲಿ ಸಂಭ್ರಮ ಹುಟ್ಟಿದ್ದನ್ನು ಊಹಿಸಿಕೊಳ್ಳುವುದು ಕಷ್ಟವೇನಲ್ಲ ಆತನು "ಯೋನನ ಮಗನಾದ ಸೀಮೋನನೇ[22] ನೀನು ಧನ್ಯನು; ಈ ಗುಟ್ಟು ನಿನಗೆ

ತಿಳಿಸಿದನು ನರಮನುಷ್ಯನಲ್ಲ, ಪರಲೋಕದಲ್ಲಿರುವ[23] ನನ್ನ ತಂದೆಯೇ ತಿಳಿಸಿದನು. ಮತ್ತು ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ ಅದೇನಂದರೆ - ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು'' ಎಂದು ಹೇಳಿದನು (ಮತ್ತಾಯ 16:17, 18).

ವಿವಾದವು ಹುಟ್ಟಿದ್ದು "ಪೇತ್ರ" ಮತ್ತು "ಬಂಡೆ" ಎಂಬ ಪದಗಳ ಮೇಲೆ ಸಭೆಯು ಪೇತ್ರನ ಮೇಲೆ ಕಟ್ಟಲ್ಪಟ್ಟಿತು ಎಂದು ವಚನ 18 ಬೋಧಿಸುವುದಾಗಿದೆ ಎಂದು ಕೆಥೋಲಿಕರು ವಾದಿಸುತ್ತಾರೆ.[24] ಗ್ರೀಕ್ ಭಾಷಾಂತರದಲ್ಲಿ "ಪೇತ್ರ" ಇದರ ಅರ್ಥವು "ಬಂಡೆ" ಎಂದಿರುವುದು ನಿಜವೇ. ಆದರೆ ವಚನ 18ರಲ್ಲಿ ಯೇಸು ಎರಡು ವಿಭಿನ್ನ ಪದಗಳನ್ನು "ಬಂಡೆ"ಗಾಗಿ ಬಳಸಿದ್ದಾನೆ. "ಪೇತ್ರ" ಎಂಬ ಪದವು *ಪೆತ್ರೋಸ್* ಎಂಬ ಪದದಿಂದ ಭಾಷಾಂತರವಾಗಿದೆ. ಕೇವಲ ವಿಭಿನ್ನ ಪದಗಳು ಬಳಸಲ್ಪಟ್ಟಿವೆ ಎಂಬುದಕ್ಕಲ್ಲ, ಆದರೆ ಮೊದಲನೆಯದು ಪುಲ್ಲಿಂಗವಾಗಿದೆ ಎರಡನೆಯದು ಸ್ತ್ರೀಲಿಂಗವಾಗಿದೆ. ಮುಂದೆ, ಪದಗಳ ಅರ್ಥವೂ ಕೂಡ ವಿಭಿನ್ನವಾಗಿದೆ. W. E. Vine ರವರು, ಹೀಗೆ ಬರೆಯುತ್ತಾರೆ. "ಪೇತ್ರಾ, ಬಂಡೆಯ ಗುಂಪನ್ನ ಸೂಚಿಸುತ್ತಿದ್ದು, ಪೆತ್ರೋಸ್‌ದಿಂದ ವಿಶಿಷ್ಟವಾಗಿದ್ದಂತೆ, ಒಂದು ನಿರ್ಲಿಪ್ತ ಕಲ್ಲು ಅಥವಾ ದೊಡ್ಡ ಬಂಡೆಯಾಗಿದೆ. ಅಥವಾ ಒಗೆಯುವಂತ ಅಥವಾ ಸುಲಭವಾಗಿ ಸರಿಸುವಂತಂಹ ಕಲ್ಲು ಆಗಿರಬಹುದು."[25]

ಕ್ರಿಸ್ತನು ಪದಗಳ ಮೇಲೆ ಆಟವಾಡುವುದಕ್ಕಾಗಿ ಇದನ್ನು ಬಳಸಿದನು. ನನ್ನ ಮನದಲ್ಲಿ, ಕಲ್ಲನ್ನು ತನ್ನ ಕೈಯಲ್ಲಿ ಇರಿಕೊಂಡು ತೂರುತ್ತಿದ್ದಂತೆಯೇ "ಪೇತ್ರನೇ ನೀನು ಬಂಡೇ" ಎಂದು ಹೇಳಿದನು. ನಂತರ ಕೈಸರೆಯ ಫಿಲಿಪ್ಪಿ ಅಡಿಪಾಯದ ಕೆಳಕಲ್ಲಿ ನತ್ತ ಸನ್ನೆ ಮಾಡುತ್ತ "ಆದರೆ ಆ ಕಲ್ಲಿನಂತಿರುವುದರ ಮೇಲೆ, ನಾನು ಸಭೆಯನ್ನು ಕಟ್ಟುವೆ" ಎಂದು ಹೇಳುತ್ತಿರುವುದನ್ನು ನಾನು ನೋಡಬಲ್ಲೆ.

ಯಾವುದರ ಮೇಲೆ ಕರ್ತನು ತನ್ನ ಸಭೆಯನ್ನು ಕಟ್ಟಬೇಕು ಎನ್ನುತ್ತಿದ್ದಾನೋ ಆ ಕಲ್ಲು ಯಾವುದು? ಅನೇಕ ಕ್ಯಾಥೊಲಿಕ್ ಅಲ್ಲದ ವಿಶ್ಲೇಷಣೆಕಾರರು ಪೇತ್ರನು ಕೇವಲ ಒಪ್ಪಿಕೊಂಡನು ಇದು ಮೂಲಸತ್ಯವೆಂದು ಒಪ್ಪುತ್ತಾರೆ.[26] ಉದಾಹರಣೆಗೆ J. W. McGarvey ರವರು ಹೀಗೆ ಸೂಚಿಸುತ್ತಾರೆ,

> ... ಈ ಉಪಮೇಯದಲ್ಲಿ ಯೇಸು ತಾನೇ ಕಟ್ಟಡಕಟ್ಟುವವನ ಸ್ಥಾನವನ್ನು ಆಕ್ರಮಿಸಿಕೊಂಡಿದ್ದರಿಂದ ಮತ್ತು ಸಿಮೋನ ಪೇತ್ರನು ಮುಖ್ಯ ಆಳಿನಸ್ಥಾನದಲ್ಲಿದ್ದು ಯೋಗ್ಯವಾಗಿರುವಂತಹ ಅಡಿಪಾಯಕ್ಕೋಸ್ಕರ ಅವರಲ್ಲಿ ಯಾರೊಬ್ಬರೂ ಇಲ್ಲ. ಅಂಥ ಅನ್ವಯಗಳು ಮಾಡಲು ಬದ್ಧವಾದವುಗಳಾಗಿ ಇನ್ನೂ ಉಳಿದುಕೊಂಡಿರುವುದರಿಂದ ಪೇತ್ರನು ಮಾತನಾಡಿದಂತಹ ಅರಿಕೆಯಾಗಿದ್ದು ಅಡಿಪಾಯವು ಅಲ್ಲಿಯೇ ಇದೆ.[27]

ನೈಜವಾದ ಮಹತ್ವದ ಸಂದರ್ಭದಲ್ಲಿ ಪೇತ್ರ/ಬಂಡೆ ವಿವಾದವಾಗಿ ಅವ್ಯಕ್ತವಾಗುವದು ಎಂಥ ದುಃಖವಲ್ಲವೇ! ಪೇತ್ರನ ಅರಿಕೆಯಿಂದ ಉತ್ತೇಜಿತನಾದ ಯೇಸು ತನ್ನ ಶಿಷ್ಯರು ಭವಿಷ್ಯದ ಅನಾವರಣಕ್ಕೆ ಸಿದ್ಧರಿದ್ದಾರೆಂದು ಯೋಚಿಸಿದನು. ಹೀಗೆ ಆತನು ಮೊದಲಿಗೆ ಆಶ್ಚರ್ಯಕಾರಿ ಹೇಳಿಕೆಯನ್ನು ಕೊಟ್ಟನು ಅದು *ಆತನು ಸಭೆಯನ್ನು*, ತನ್ನ ಸಭೆಯನ್ನು ಸಂಸ್ಥಾಪಿಸುವುದಕ್ಕೆ ಬಂದಿದ್ದಾನೆ (ನೋಡಿರಿ ಎಫೆಸ 1:22, 23; 2:16; 3:10, 11; ಕೊಲಸ್ಸೆ 1:18). ನಾನು ಇದನ್ನು ಗಾಬರಿಗೊಳಿಸವಂಥದ್ದು ಎಂದು ಕರೆಯುತ್ತೇನೆ ಯಾಕೆಂದರೆ ಇದು ಸಂಪೂರ್ಣವಾಗಿ ಯೋಚಿಸಿದಂತದ್ದು ಆಗಿತ್ತು. ಯೆಹೂದಿಗಳ ವಿಷಯದ ಅಡಕ, ಭೌತಿಕ ರಾಜ್ಯದ ಜೊತೆ ಇದು ಕಾಣಿಸಿಕೊಂಡಿರಲಿಲ್ಲ.

ಈ ವಿಷಯವನ್ನು ತಿಳಿಸುತ್ತಾ, ಕ್ರಿಸ್ತನು ಸಂಪೂರ್ಣವಾಗಿ ಮೆಸ್ಸೀಯನ ರಾಜ್ಯವನ್ನು/ತನ್ನ ಶಿಷ್ಯರಿಗೆ ಪರಿಚಿತವಿದ್ದ ರಾಜ್ಯದ ಪಾರಿಭಾಷೆಯನ್ನು ಸಂಪೂರ್ಣವಾಗಿ ತ್ಯಜಿಸಲಿಲ್ಲ (ನೋಡಿ ಮತ್ತಾಯ 16:19); ಆದರೆ ಆತನು ಇದಕ್ಕೆ ಪ್ರಯುಕ್ತವಾಗಿ, ತನ್ನ ರಾಜ್ಯವು ಸ್ವಭಾವದಲ್ಲಿ

ಬಾಹ್ಯವಾಗಿರುವುದಲ್ಲ, ಆದರೆ ಬದಲಾಗಿ ಆತ್ಮೀಕವಾಗಿರುವದು ಎಂದು ಘೋಷಿಸಿದನು. ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ ಆತನಿಗೆ ಯಾವ ಆಸಕ್ತಿಯೂ ಇರಲಿಲ್ಲ; ಆತನು ತನ್ನ ಸಭೆಯನ್ನು ಕಟ್ಟುವವನಿದ್ದನು.

ಹೊಸ ಒಡಂಬಡಿಕೆಯಲ್ಲಿ ಇದೇ ಮೊದಲಬಾರಿ "ಸಭೆ" ಎಂಬ ಪದವು ಬಳಸಲ್ಪಟ್ಟಿದೆ, ಆದರೆ ನಿಶ್ಚಿತವಾಗಿ ಇದೇ ಕೊನೆಯಲ್ಲ. ಹೊಸ ಒಡಂಬಡಿಕೆಯಲ್ಲಿ ನೂರಕ್ಕಿಂತ ಹೆಚ್ಚು ಬಾರಿ "ಸಭೆ" ಎಂಬ ಪದವು ಸಿಕ್ಕುತ್ತದೆ.[28] ಯೇಸುವಿನ ಪುನರುತ್ಥಾನದ ಮತ್ತು ರಾಜ್ಯದ/ಸಭೆಯ ಸಂಸ್ಥಾಪನದ ನಂತರ ಯೇಸುವಿನ ಹಿಂಬಾಲಕರ ಗುಂಪನ್ನು ವರ್ಣಿಸುವಂತಹ ಪ್ರಭಲ ಪದ ವಾಯಿತು.

ಈಗ ನಾವು ಮತ್ತಾಯ 16:18, 19ರಲ್ಲಿನ ಪೇತ್ರನ ಬಗೆಗಿನ ಯೇಸುವಿನ ಹೇಳಿಕೆಯತ್ತ ತಿರುಗೋಣ. ಮೆಸ್ಸೀಯನ ರಾಜ್ಯವು ನಾಶವಾಗದು ಎಂದು ದಾನಿಯೇಲನು ಪ್ರವಾದಿಸಿದ್ದಾನೆ (ದಾನಿಯೇಲ 2:44). ಈಗ ಕ್ರಿಸ್ತನು ತನ್ನ ಸಭೆ/ರಾಜ್ಯವು ಎಂದಿಗೂ ಅಳಿದು ಹೋಗದು ಎಂದು ಘೋಷಿಸುತ್ತಿದ್ದಾನೆ: "ಪಾತಾಳದ ಬಲವು ಅದನ್ನು ಸೋಲಿಸದು" (ಮತ್ತಾಯ 16:18). "ಪಾತಾಳಲೋಕ" ಯಾರೂ ಕಾಣದ ಮರಣದ ಲೋಕವಾಗಿದೆ. ಮತ್ತು ಪ್ರತಿಯೊಬ್ಬನು ಕ್ರೂಜೆಗೆ ಹಾಕಿದೊಡನೆಯೇ ದೇವರ ಯೋಜನೆಯನ್ನು ನಿಷ್ಫಲಗೊಂಡಿದೆ ಎಂದು ಸ್ಪಷ್ಟ ವಾಗಿ ಯೋಚಿಸುತ್ತಿರಬಹುದು, ಆದರೆ ಆ ಮರಣವು ಸಭೆಯ ಇರುವಿಕೆಗೆ ಅವಶ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 20:28; ಎಫೆಸ 5:23, 25). ಸಭೆಯ ಸದಸ್ಯರ ಮರಣವೂ ಕೂಡಾ ಅದನ್ನು ನಾಶಮಾಡದು.[29] ನಂತರ ಸೈತಾನನು ಕ್ರೈಸ್ತರ ವಿರುದ್ಧ ಹಿಂಸೆಯನ್ನು ಪ್ರೇರೇಪಿಸಿದನು, ಆದರೆ ಆತನ ದಬ್ಬಾಳಿಕೆಯು ಅದನ್ನು ನಾಶಮಾಡುವ ಬದಲು ಎಲ್ಲಡೆ ಹರಡಿಸಿತು (ಅಪೊಸ್ತಲರ ಕೃತ್ಯಗಳು 8:1-4).

ಮುಂದೆ ಕ್ರಿಸ್ತನು ಈ ವಾಗ್ದಾನದೊಡನೆ ಅಪೊಸ್ತಲರೊಡನೆ ಸ್ಪಷ್ಟವಾಗಿ ಮಾತನಾಡುವ ಮೂಲಕ ಸಾರ್ಥಕಮಾಡಿದನು: "ಪರಲೋಕದ ಬೀಗದ ಕೈಗಳನ್ನು ನಿನಗೆ ಕೊಡುವೆನು: ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿ ಕಟ್ಟಿರುವದು ಮತ್ತು ಭೂಲೋಕದಲ್ಲಿ ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿ ಬಿಚ್ಚಿರುವದು" ಎಂದು ಬಹುಮಾನಿಸಿದನು (ಮತ್ತಾಯ 16:19).

ವಾಗ್ದಾನದ ಎರಡನೆಯ ಭಾಗವು ಕಟ್ಟುವದು ಮತ್ತು ಬಿಚ್ಚಿರುವದು ಆಗಿದ್ದು ಪೇತ್ರನ ವಿಶೇಷವಾದ ಅಧಿಕಾರ ಅದು ಆಗಿರಲಿಲ್ಲ; ನಂತರದಲ್ಲಿ ಆ ವಾಗ್ದಾನವು ಎಲ್ಲಾ ಅಪೊಸ್ತಲರಿಗೆ ವಿಸ್ತರಿಸಲ್ಪಟ್ಟಿತು (ಮತ್ತಾಯ 18:18). ವೇದಭಾಗವು ಹೇಗೆ ಓದಲ್ಪಡುವುದೆಂದು ಗಮನಿಸಿರಿ. "... ಭೂಲೋಕದಲ್ಲಿ ನೀವು ಯಾವುದನ್ನು ಕಟ್ಟುತ್ತಿದೋ, ಅದು ಪರಲೋಕದಲ್ಲಿಯೂ *ಕಟ್ಟಿರುವದು* ಮತ್ತು ಭೂಲೋಕದಲ್ಲಿ ನೀವು ಏನೇನು ಯಾವುದನ್ನು ಬಿಚ್ಚುತ್ತೀರೋ ಅದು ಪರಲೋಕದಲ್ಲಿಯೂ *ಬಿಚ್ಚಿರುವದು*" (ಒತ್ತಿ ಹೇಳಿದ್ದು ನನ್ನದು). ಇದನ್ನು ಓದಲು ಏಕೋ ಮುಜುಗರವೆನ್ನಿಸುತ್ತದೆ,[30] ಆದರೆ ಇದೊಂದು ಅಕ್ಷರಸಹ ಆದಂತ ಭಾಷಾಂತರವಾಗಿದೆ. ಅಪೋಸ್ತಲರ ದೈವಪ್ರೇರೇಪಿತ ಬೋಧನೆಯನ್ನು ಯೇಸು ಒತ್ತಿ ಹೇಳುತ್ತಿದ್ದಾನೆ (ಇದು ಕಟ್ಟುವದು ಮತ್ತು ಬಿಚ್ಚುವದು ಎರಡು ಆಗಿರಬಹುದು), ಆದರೆ ಅವುಗಳು ಅವರ ತಾತ್ವಿಕದ ಮೂಲವಾಗಿರಬಾರದೆಂದು ಸಹ ಆತನು ಒತ್ತಿಹೇಳುತ್ತಿದ್ದಾನೆ: "ಕಟ್ಟುವದು" ಮತ್ತು "ಕಳೆದು ಕೊಳ್ಳುವದು" *ಪರಲೋಕದ* ಮೂಲಗಳಾಗಿವೆ, ಮತ್ತು (ಆಗ ಮಾತ್ರವೇ) ಅಪೊಸ್ತಲರು, ದೈವಪ್ರೇರಣೆಯಿಂದ, ಭೂಮಿಯ ಮೇಲೆ "ಕಟ್ಟುವವರು" ಮತ್ತು "ಬಿಚ್ಚುವವರೂ" ಆಗಿರುತ್ತಾರೆ.

ಯೇಸು ಪೇತ್ರನಿಗೆ ವಿಶೇಷ ಅಧಿಕಾರವನ್ನು ಕೊಟ್ಟನು ಮೊದಲ ಭಾಗದ ವಾಗ್ದಾನವು: "ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು." ಬೀಗದ ಕೈಗಳ ಮೂಲ ಉದ್ದೇಶವು ತೆರೆಯುವದು ಮತ್ತು ಪ್ರವೇಶಕ್ಕೆ ಅವಕಾಶವನ್ನು ಮಾಡುವದಾಗಿದೆ.

ಯೆಹೂದಿಗಳಿಗೂ ಮತ್ತು ಅನ್ಯಜನಾಂಗದವರಿಗೂ ಹೇಗೆ ರಕ್ಷಿಸಲ್ಪಡಬೇಕು ಎಂದು ಮೊದಲು ಹೇಳಿದವನೇ ಪೇತ್ರನು (ಅಪೊಸ್ತಲರ ಕೃತ್ಯಗಳ 2:14-43; 10:24-43, 47; 15:7), ಮತ್ತು ಹೀಗೆ ರಾಜ್ಯವನ್ನು/ಸಭೆಯನ್ನು ಪ್ರವೇಶಿಸಬಹುದು. ಏನೇ ಆಗಲಿ, ಜನರಿಗೆ ಹೇಗೆ ರಕ್ಷಿಸಲ್ಪಡಬೇಕೆಂದು ಹೇಳುವ ಅವಕಾಶವು ಕೇವಲ ಪೇತ್ರನದು ಮಾತ್ರವಾಗಿರಲಿಲ್ಲ; ಎಲ್ಲಾ ಅಪೊಸ್ತಲರೂ ರಕ್ಷಿಸಲ್ಪಡುವ ಸುವಾರ್ತೆಯನ್ನು ಬೋಧಿಸಿದರು. ಪೇತ್ರನ ವಿಶೇಷ ಬಹುಮಾನವು ಹಾಗೆ ಮಾಡುವಲ್ಲಿ *ಮೊದಲಾಯಿತು.*

ಇದೊಂದು ಪ್ರೋತ್ಸಾದಾಯಕವಾದ ದಿನವಾಗಿತ್ತು. ಶಿಷ್ಯರಿಗೆ ಕಲಿಯುವದು ಇನ್ನೂ ಇತ್ತು. ಆದರೆ ಅವರ ನಂಬಿಕೆಯು ಬದಲಾಗಿತ್ತು. ಯೇಸು ಅವರನ್ನು ಮೆಚ್ಚಿಸಬಹುದಿತ್ತು ಆದರೆ "ಆತನು ಕ್ರಿಸ್ತನಾಗಿದ್ದಾನೆಂಬುದನ್ನು ಯಾರಿಗೂ ಹೇಳಬಾರದೆಂದು ಆತನು ಶಿಷ್ಯರಿಗೆ ಖಂಡಿತ ವಾಗಿ ಹೇಳಿದನು" (ಮತ್ತಾಯ 16:20). ಸತ್ಯದ ರಕ್ತ ಪ್ರಕಟಣೆಯ ಸಮಯವು ಬರಬೇ ಕಾಗಿತ್ತು (ನೋಡಿ ಅಪೊಸ್ತಲರ ಕೃತ್ಯಗಳು 2:36). ಆದರೆ ಅಸಮಯವು ಇನ್ನೂ ಬಂದಿಲ್ಲ.

## ಕೊಳ್ಳದಲ್ಲಿ: ಯೇಸು ಆತಂಕಪಟ್ಟದ್ದು
## (ಮತ್ತಾಯ 16:21-28; ಮಾರ್ಕ 8:31-38; ಲೂಕ 9:22-27)

ತನ್ನ ಶಿಷ್ಯರು ಭವಿಷ್ಯದ ಬಗ್ಗೆ ತಿಳಿದುಕೊಳ್ಳಲು ಸಿದ್ಧರಾಗಿದ್ದಾರೆಂಬುದಕ್ಕಾಗಿ ಎಂದು ಯೋಚಿಸಿ, ಯೇಸು ತನ್ನ ಸಭೆಯ ಸಂಸ್ಥಾಪನೆಯನ್ನು ಉದ್ಘೋಶಿಸಿದನು. ಹೇಗೋ, ಅಲ್ಲಿ ಆತನ ಮರಣವಿಲ್ಲದೆ ಯಾವುದೇ ಸಭೆಯು ಇಲ್ಲದಿರುವುವದು ಅವರಿಗೆ ಆ ಉದ್ಘೋಷಣೆಯ ಪರಿಕರಣಗಳನ್ನು ಒಪ್ಪಿಕೊಳ್ಳುವುದು ಅವರಿಗೆ ಕಠಿಣವಾಗಿ ಕಂಡುಬಂದಿತು. ಸಭೆಯು ಆತನ ರಕ್ತದ ಮೂಲಕ ರಕ್ಷಿಸಲ್ಪಟ್ಟ ಜನರ ದೇಹವಾಗಿರುವುದಾಗಿತ್ತು (ಎಫೆಸ 5:23, 25; ನೋಡಿ ಅಪೊಸ್ತಲರ ಕೃತ್ಯಗಳು 20:28). ಆತನು ಮರಣಿಸಲಿರುವನು ಎಂಬುದನ್ನು ತನ್ನ ಅಪೊಸ್ತಲರಿಗೆ ಹೇಳುವ ಸಮಯವು ಬಂದಿತು.

### ಕೆಟ್ಟದ್ದಾಗಿ ನಡಿಸಿಕೊಳ್ಳುವಿಕೆಯ ಎದುರು ನೋಡುವಿಕೆಯ ಪ್ರಯಾಸ

ತನ್ನ ಬರಲಿರುವ ಮರಣದ ಬಗೆಗೆ ಕ್ರಿಸ್ತನು ಹಿಂದೆ ಮಾತನಾಡಿದ ಪದಗಳಿಂದ ಹೊದಗಿಸಿದನು (ಮತ್ತಾಯ 9:15; 10:38; 12:38-40; ಯೋಹಾನ 2:19-22; 3:14, 15), ಆದರೆ ಈಗ ಆತನು ಅಲಂಕರಾತ್ಮಕ ಭಾಷೆಯನ್ನು ನಿಲ್ಲಿಸಿದನು. ಮತ್ತಾಯನು, "ಅಂದಿನಿಂದ ಯೇಸು ಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವುದಕ್ಕೆ ಪ್ರಾರಂಭಮಾಡಿದನು" (ಮತ್ತಾಯ 16:21). "ಹಿರಿಯರು ಮತ್ತು ಮಹಾಯಾಜಕರೂ" ಎಂಬ ಪದವು ಸನ್ಹದ್ರಿನ್ ಎಂಬುದಕ್ಕೆ ಪರ್ಯಾಯಪದವಾಗಿದ್ದು,[31] ಇತರ ಮೂರು ಭಾಗಗಳನ್ನು ಸೂಚಿಸುವುದಾಗಿದೆ. ನಿಮ್ಮ ಮನದಲ್ಲಿ "ಮಾಡಲೇಬೇಕು" ಎಂಬುದನ್ನು ಮಹತ್ವದ್ದೆಂದು ತಿಳಿದುಕೊಳ್ಳಿರಿ: ದೇವರ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಪರಿಪೂರ್ಣಗೊಳಿಸಲು ಯೇಸು ಒಪ್ಪಲ್ಪಟ್ಟನು (ಯೋಹಾನ 6:38)! "... ಮನುಷ್ಯ ಕುಮಾರನು ಕೊಲ್ಲಲ್ಪಟ್ಟ ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರಬೇಕಾಗಿದೆ ಎಂದು ಉಪದೇಶಮಾಡುವುದಕ್ಕೆ ಪ್ರಾರಂಭಮಾಡಿದನು. ಆತನು ಈ ಮಾತನ್ನು ಏನೂ *ಗುಂಬವಲ್ಲದೆ* ಹೇಳಿದನು" ಎಂದು ಮಾರ್ಕನ ವಿವರಣೆಯು ಹೇಳುವುದಾಗಿದೆ (ಮಾರ್ಕ 8:31, 32; ಒತ್ತಿ ಹೇಳಿದ್ದು ನನ್ನದು).

### ತಪ್ಪು ತಿಳುವಳಿಕೆಯಿಂದ ಹೊರೆಯಾದದ್ದು ಆತನನ್ನು ಸುತ್ತುವರೆದಿತ್ತು

ಯೇಸುವಿನ ಹೇಳಿಕೆಯ ಸ್ಪಷ್ಟತೆಯು ಇದನ್ನು ಅರಿತುಕೊಳ್ಳಲು ಮತ್ತು ಒಪ್ಪಿಕೊಳ್ಳಲು

ಶಿಷ್ಯರಿಗೆ ಸರಳವಾಗಿ ಸಹಾಯಿಸಲಿಲ್ಲ. ಮೆಸ್ಸಿಯ ರಾಜ್ಯವು ರಾಜಕೀಯವಾಗಿರುತ್ತದೆ ಎಂದು ಅವರು ಕಲಿಸಲ್ಪಟ್ಟಿದ್ದರು. ಆದ್ದರಿಂದ ಮರಣದ ಬಗೆಗಿನ ಕ್ರಿಸ್ತನ ಮಾತುಗಳು ಯಾವುದೇ ಅರ್ಥವನ್ನುಂಟು ಮಾಡಲಿಲ್ಲ. ನೀವು ಧಾರ್ಮಿಕ ದೋಷದ ಹಿಂದಿರಬಹುದು ಆದರೆ ಸತ್ಯವನ್ನು ಅರಿತುಕೊಂಡಂತ, ನೀವು ಅವರ ಹೋರಾಟವನ್ನು ಮೆಚ್ಚಿಕೊಳ್ಳುವಿರಿ.

ಪೇತ್ರನು ವಿಶೇಷವಾಗಿ ಕರ್ತನ ಈ ಉದ್ಘೋಷಣೆಯೊಂದಿಗೆ ತೊಂದರೆಯಲ್ಲಿದ್ದನು. ಆತನು ಯೇಸುವನ್ನು ಕ್ರಿಸ್ತನೆಂದು ಮೆಸ್ಸಿಯನೆಂದು ಅರಿಕೆಮಾಡಿದವನಾಗಿದ್ದನು! ಆತನು ಸಹ ತನ್ನ ಮನದಲ್ಲಿ, ಯೇಸು ಮುಂದೆ ಹೋಗುತ್ತಾನೆ ಮತ್ತು ತನ್ನ ರಾಜ್ಯವನ್ನು ಭೌತಿಕ ರಾಜ್ಯವನ್ನು ಸ್ಥಾಪಿಸುತ್ತಾನೆ ಎಂಬುದನ್ನು ಎಂಬ ವಿಶ್ವಾಸವನ್ನು ಹೊಂದಿ ಅರಿತುಕೊಂಡಿದ್ದನು! ಅಪೊಸ್ತಲರಿಗೆ ಸಂಬಂಧಿಸಿದಂತೆ, ಮರಣಿಸಿದ ಮೆಸ್ಸೀಯನ ವಿಚಾರವು ಎಬ್ಬಿಸಲ್ಪಡುವ ಮೆಸ್ಸೀಯನ ವಿಷಯಕ್ಕೆ ಸರಿಹೊಂದುವುದಾಗಿರಲಿಲ್ಲ.[32] ಆದ್ದರಿಂದ ಆತನು ಕ್ರಿಸ್ತನನ್ನು ಸರಿಮಾಡುವುದ ಕಾರ್ಯವನ್ನು ತನ್ನ ಮೇಲೆ ಹೊತ್ತುಕೊಂಡನು!

ತನ್ನ ಗುರುವನ್ನು ಮುಜುಗರಕ್ಕೀಡು ಮಾಡಲು ಮನಸ್ಸಿಲ್ಲದೆ ಪೇತ್ರನು ಆತನನ್ನು ಇತರ ಶಿಷ್ಯರಿಂದ "ಆಚೆ ಕರೆತಂದನು." ಅವರು ಏಕಾಂತವಾಗಿದ್ದಾಗ, ಆತನು "ಸ್ವಾಮಿ ದೇವರು ನಿನ್ನನ್ನು ಕಾಯಲಿ ನಿನಗೆ ಹೀಗೆ ಎಂದಿಗೂ ಆಗಬಾರದು!" ಎಂದು ಹೇಳುತ್ತಾ "ಗದರಿಸುವುದಕ್ಕೆ ಪ್ರಾರಂಭಿಸಿದನು" (ಮತ್ತಾಯ 16:22). ಈ ಸಂದರ್ಭದಲ್ಲಿ ಪೇತ್ರನ ಈ ಧೈರ್ಯವು ಹೆಚ್ಚುಕಡಿಮೆ ತಿಳುವಳಿಗೆ ಮೀರಿದ್ದಾಗಿತ್ತು ಆದರೆ ಆತನು ತಿಳಿದಿದ್ದಕ್ಕಿಂತ ಹೆಚ್ಚಿನದನ್ನು ಅವರು ತಿಳಿದಿದ್ದಾರೆಂದು ಕರ್ತನ ಹಿಂದೆ ಯಾವಾಗಲೂ ಇರುತ್ತಿದ್ದಂತ ಜನರು ಬಹಿರಂಗವಾಗಿ ಹೇಳುವುದನ್ನು ಯೋಚಿಸತೊಡಗಿದರು.

ಯೇಸುವಿನ ಗದರಿಕೆಯು ಬಲು ಗಂಭೀರವಾಗಿತ್ತು ಆತನೆಂದಿಗೂ ಅಪೋಸ್ತಲರೊಂದಿಗೆ ಬಹಿರಂಗವಾಗಿ ಮಾತನಾಡಿರಲಿಲ್ಲ: "ಆತನು ಪೇತ್ರನ ಕಡೆಗೆ ತಿರುಗಿಕೊಂಡು ಪೇತ್ರ ನಿಗೆ, 'ಸೈತಾನನೇ, ನನ್ನ ಮುಂದೆ ನಿಲ್ಲಬೇಡನಡೆ! ನೀನು ನನಗೆ ವಿಘ್ನವಾಗಿದ್ದಿ ...' " (ಮತ್ತಾಯ 16:23) ಎಂದು ಗದರಿಸಿದನು. ಸ್ವಲ್ಪ ಸಮಯದ ಮುನ್ನ, ಆತನನ್ನು "ಪೇತ್ರ" ಎಂದೂ ಆತುಕೊಳ್ಳ ಬಹುದಾದ "ಬಂಡೆ" ಎಂದೂ ಕರೆದಿದ್ದನು. ಈಗ ಆತನನ್ನು ಆತನ ಸೈತಾನನ ಧೈರ್ಯವನ್ನು "ಸೈತಾನನೇ" ಎಂದು ಕರೆಯುತ್ತಿದ್ದಾನೆ.[33] ಆತನ ಭವಿಷ್ಯದಿಂದ ಆತನನ್ನು ತಡೆಗಟ್ಟಲು ಪ್ರಯತ್ನಿಸುವದರ ಮೂಲಕ ಪೇತ್ರನು ಸೈತಾನನ ಸಾಧನವಾಗಿ ಪರಿವರ್ತಿತನಾದನು ಎಂದು ಹೇಳುತ್ತಿದ್ದಾನೆ.[34]

ಪೇತ್ರನ ಸಮಸ್ಯೆಯು ಕ್ರೂಜೆಯನ್ನು ದಿವ್ಯ ದೃಷ್ಟಿಯ ಮೂಲಕ ನೋಡುವದರ ಬದಲು ಮಾನವನ ಕಣ್ಣುಗಳಿಂದ ನೋಡುವದೇ ಆಗಿತ್ತು. ಯೇಸು ಆತನಿಗೆ "... ನಿನ್ನ ಯೋಚನೆಯು ಮನುಷ್ಯರದೇ ಹೊರತು ದೇವರದಲ್ಲ" (ಮತ್ತಾಯ 16:23) ಎಂದು ಹೇಳಿದನು.

ತನಗೆ ಬರಲಿರುವ ಮರಣದಿಂದಾಗಿ ಕರ್ತನ ಮನಸ್ಸು ಭಾರವಾಗಿತ್ತು (ಮತ್ತಾಯ 26:38, 39). ಆತನ ರಾಜ್ಯದ ಮತ್ತು ಆಳ್ವಿಕೆಯ ನೈಜ್ಯ ಸ್ವಭಾವದ ಗ್ರಹಿಸುವಿಕೆಯೂ ಶಿಷ್ಯರ ವಿಫಲತೆಯು ಕೂಡ ಆ ಭಾರದೊಡನೆ ಸೇರಿತು. ಆತನ ಮರಣದ ಬದಲಾಗಿ ಅವರು ರಾಜನ ಅಧಿಕಾರದ[35] ಬಗ್ಗೆ, ಕ್ರೂಜೆಯ ಬದಲು ಕಿರೀಟ, ಹಿಂಸೆಯ ಬದಲು ಹೊಗಳಿಕೆಯನ್ನು ಅವರು ಯೋಚಿಸುವವರಾಗಿದ್ದರು.

ಯೇಸು ಎಲ್ಲಾ ಶಿಷ್ಯರನ್ನು ಕರೆದನು ಮತ್ತು ಅವರಿಗೆ ಹೀಗೆ ಹೇಳಿದನು.[36]

> ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋ

ಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು? (ಮತ್ತಾಯ 16:24-26; ನೋಡಿ ಮಾರ್ಕ 8:34-37; ಲೂಕ 9:23-25).

"ವ್ಯಭಿಚಾರಿಣಿಯಂತಿರುವ ಈ ಪಾಪಿಷ್ಟ ಸಂತತಿಯಲ್ಲಿ ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುನೋ ಅವನಿಗೆ ಮನುಷ್ಯಕುಮಾರನು ತಾನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುತ್ತಾನೆ" ಎಂದು ಕೂಡಾ ಸೇರಿಸಿದನು (ಮಾರ್ಕ 8:38). ಈ ಮಾತುಗಳು ಸಾಮಾನ್ಯವಾದ ಅನ್ವಯವಾಗಿವೆ, ಆದರೆ ಪೇತ್ರನು ಯೇಸು ತನ್ನ ಮರಣದ ಬಗ್ಗೆ ಆಡಿದ ಮಾತುಗಳಿಂದ ನಾಚಿಕೊಂಡನು ಎಂಬುದನ್ನು ಮನದಲ್ಲಿ ಇಟ್ಟುಕೊಳ್ಳಿರಿ.

ಕ್ರಿಸ್ತನು ತನ್ನ ಗದರಿಕೆಯಲ್ಲಿ, "ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ" ಬರುವುದನ್ನು ಸೂಚಿಸುತ್ತಾನೆ. "ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತರಾಗಿ *ಬರುವನು*; ಆವಾಗ ಆತನು ಒಬ್ಬೊಬ್ಬನಿಗೆ ಅವನ ನಡತೆಗೆ ತಕ್ಕ ಫಲವನ್ನು ಕೊಡುವನು" ಎಂದನು ಈಗ ಆತನು ತನ್ನ ಕೇಳುಗರಿಗೆ ಭರವಸವನ್ನು ಕೊಡುತ್ತಾನೆ (ಮತ್ತಾಯ 16:27; ಒತ್ತಿ ಹೇಳಿದ್ದು ನನ್ನದು). ಎರಡನೆಯ ಬರೋಣದ ಬಗ್ಗೆ ಇದು ಮೊದಲನೆಯ ಮುನ್ನುಡಿಯುವಿಕೆ ಆಗಿತ್ತು. ಅಪೊಸ್ತಲರ ಮನಸ್ಸು ಈ ಎಲ್ಲಾ ಹೊಸ ಕ್ರಾಂತಿಯಿಂದಾಗಿ ತಡವರಿಸುತ್ತಿತ್ತು!

ಕರ್ತನು ತನ್ನ ಶಿಷ್ಯರಿಗೆ ತನ್ನ ಮರಣವನ್ನು ಮುನ್ನುಡಿದುದರ ಅರ್ಥವು ತನ್ನ ರಾಜ್ಯವನ್ನು ಸ್ಥಾಪಿಸುವುದೇ ಯೋಜನೆಯನ್ನು ತ್ಯಜಿಸುವದಲ್ಲ ಎಂಬುದರ ಬಗ್ಗೆ ಅಶ್ವಾಸನೆಯನ್ನು ಕೊಡುತ್ತಾ ಸಮಾರೋಪಿಸಿದನು: "ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಭಲವಾಗಿ ಬಂದಿರುವುದನ್ನು ನೋಡುವ ತನಕ ಮರಣಹೊಂದುವುದಿಲ್ಲವೆಂದು[37] ಹೇಳಿದನು" (ಮಾರ್ಕ 9:1; ಇದನ್ನು ಸಹ ನೋಡಿರಿ ಮತ್ತಾಯ 16:28; ಲೂಕ 9:27). "ಪ್ರಭಲವಾಗಿ" ಎಂಬ ಪದಕ್ಕೆ ಹತ್ತಿರದಿಂದ ಲಕ್ಷಣವಹಿಸೋಣ. ಕ್ರಿಸ್ತನು ತನ್ನ ತಂದೆಯ ಬಳಿಗೆ ಏರಿಹೋಗುವ ಮೊದಲು ತನ್ನ ಅಪೊಸ್ತಲರಿಗೆ ಅವರ ಮೇಲೆ ಪವಿತ್ರಾತ್ಮನು ಬಂದಾಗ ಅವರು "*ಬಲವನ್ನು* ಹೊಂದುವರು" ಎಂದು ಹೇಳುವವನಿದ್ದನು (ಅಪೊಸ್ತಲರ ಕೃತ್ಯಗಳು 1:8; ಒತ್ತಿ ಹೇಳಿದ್ದು ನನ್ನದು). ಮತ್ತು "ಮೇಲಣ ಲೋಕದಿಂದ *ಶಕ್ತಿಯನ್ನು* ಪಡೆಯುವ ತನಕ" ಅವರು ಯೆರೂಸಲೇಮಿನಲ್ಲಿ ಇರಬೇಕಿತು (ಲೂಕ 24:49; ಒತ್ತಿ ಹೇಳಿದ್ದು ನನ್ನದು). ದಿವಾರೋಹಣದ ಹತ್ತು ದಿನಗಳ ನಂತರ, ಯೆಹೂದಿ ಹಬ್ಬವಾದ ಪಂಚಾಶತ್ತಮದಿನದಂದು ಪರಿಶುದ್ಧಾತ್ಮನ ಶಕ್ತಿಯು ಅವರ ಮೇಲೆ ಬಂದಿತು (ಅಪೊಸ್ತಲರ ಕೃತ್ಯಗಳು 2:1-4) ಮತ್ತು ಯೇಸು ತನ್ನ ಸಭೆ/ರಾಜ್ಯ ಕಟ್ಟು ವಾಗ್ದಾನವನ್ನು ಪರಿಪೂರ್ಣಗೊಳಿಸಿದನು (ಓದಿರಿ ಅಪೊಸ್ತಲರ ಕೃತ್ಯಗಳು 5:11; 8:1; ಕೊಲೊಸ್ಸೆ 1:13; ಪ್ರಕಟಣೆ 1:6, 9 ಓದಿರಿ).[38]

ಅವರ ಜೀವಿತ ಸಮಯದ ಆರಂಭದಲ್ಲಿ ಪ್ರಭಾವದೊಡನೆ ದೇವರ ರಾಜ್ಯಬರುವುದರಲ್ಲಿ ಕ್ರಿಸ್ತನ ಅರ್ಥವೇನು ಎಂದು ಅಪೊಸ್ತಲರು ಅರಿತುಕೊಂಡರೇ? ಇಲ್ಲ, ಬದಲಾಗಿ ಸಭೆಯ ಸ್ಥಾಪನೆಯ ಬಗೆಗಿನ ಮತ್ತು ಎರಡನೆಯ ಬರೋಣದ ಆತನ ಉದ್ಘೋಷಣೆಗಿಂತ ಈ ಬೋಧನೆಯ ಬಗ್ಗೆ ಯಾವ ಹೆಚ್ಚಿನದನ್ನು ತಿಳಿದುಕೊಳ್ಳಲಿಲ್ಲ ಆದರೆ ಬೀಜವು ಬಿತ್ತಲ್ಪಟ್ಟಿತು.

## ಬೆಟ್ಟದ ತುದಿಯಲ್ಲಿ ಯೇಸು ಪ್ರೋತ್ಸಾಹಿಸಲ್ಪಟ್ಟಿದ್ದು (ಮತ್ತಾಯ 17:1-13; ಮಾರ್ಕ 9:2-13; ಲೂಕ 9:28-36)

ಮುಂದಿನ ಕೆಲದಿನಗಳ ಮೇಲೆ ಯಾವುದು ಸ್ಪಷ್ಟವಾಯಿತೆಂದು ಸುವಾರ್ತೆಯ ವಿವರಣೆಯು ನಮಗೆ ತಿಳಿಸುವುದಿಲ್ಲ. ಯೇಸುವಿನ ಮಾತುಗಳ ಮತ್ತು ಅವರ ಜೀವನದಲ್ಲಿ ಈ

ವಿಷಯದ ಬಗ್ಗೆ ಕಲಿಸಲ್ಪಟ್ಟ ಸಂಗತಿಗಳ ಜೊತೆ ನಿರ್ಣಯಿಸಲು ಶಿಷ್ಯರು ಹೋರಾಡುವ ಬೇಗೆ ಬೆಳೆಯುತ್ತಿರುವುದನ್ನು ಕೇವಲ ನಾವು ಊಹಿಸಬಹುದಾಗಿದೆ. ಆ ಸಮಯದ ಕೊನೆಯಲ್ಲಿ, ಕರ್ತನು ಇನ್ನೊಂದು ಬೆಟ್ಟದ ತುದಿಯ ಅನುಭವಕ್ಕಾಗಿ ಸದ್ಧನಾಗಿರಬಹುದು, ಮತ್ತು ಅಕ್ಷರ ಸಹ ಆತನು ಪಡೆದನು.

**ಬೆಟ್ಟದ ಮೇಲೆ: ಯೇಸು ಸಿದ್ಧನಾದನು**

> ಆರು ದಿವಸಗಳಾದ ಮೇಲೆ ಯೇಸು ಪೇತ್ರನನ್ನು ಯಾಕೋಬನನ್ನೂ ಇವನ ತಮ್ಮನಾದ ಯೋಹಾನನನ್ನೂ ಮಾತ್ರ ವಿಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು. ಅಲ್ಲಿ ಅವರ ಕಣ್ಣಮುಂದೆ ಆತನ ರೂಪ ಬೇರೆಯಾಯಿತು; ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು. ಇದಲ್ಲದೆ ಮೋಶೆಯೂ ಎಲೀಯನೂ ಆತನ ಸಂಗಡ ಮಾತನಾಡುತ್ತಾ ಅವರಿಗೆ ಕಾಣಿಸಿಕೊಂಡರು (ಮತ್ತಾಯ 17:1-3).

ಮೋಶೆ ಮತ್ತು ಎಲಿಯರು ಯೇಸುವಿನ ಮಧ್ಯದಲ್ಲಿ ಚರ್ಚಿಸಲ್ಪಡುತ್ತಿದ್ದ ವಿಷಯವನ್ನು ಲೂಕನು ದಾಖಲಿಸಿದ್ದಾನೆ. "ಅವರು ಯೆರೂಸಲೇಮಿನಲ್ಲಿ ನೆರವೇರಬೇಕಾಗಿದ್ದ ಆತನ ಮರಣದ departure ವಿಷಯವಾಗಿ ಮಾತನಾಡುತ್ತಿದ್ದರು" (ಲೂಕ 9:31). ಇಂಗ್ಲೀಷ್‌ನಲ್ಲಿ ಇದು "departure" ಎಂದಿದ್ದು ಇದನ್ನು ಮರಣ ಎಂದು ಓದುತ್ತೇವೆ. ಮೆಸ್ಸೀಯನ ಮರಣದ ವಿಷಯವಾಗಿ ಶಿಷ್ಯರು ಹೋರಾಡುವವರಾಗಿದ್ದರು, ಆದರೆ ಎಲ್ಲಾ ಕಾಲದವರೂ ನಂಬಿಗಸ್ತ ರಾಗಿರುವುದಕ್ಕೋಸ್ಕರ ಆತನ ಮರಣವು ಎಷ್ಟು ಅವಶ್ಯವೆಂದು ಹಳೆಯ ಒಡಂಬಡಿಕೆಯ ನಾಯಕರು ಬಲ್ಲವರಾಗಿದ್ದರು (ಇಬ್ರಿಯ 9:15).

ಅನುಭವದಿಂದ ಸೆದೆಬಡಿಯಲ್ಪಟ್ಟು ಮತ್ತು ಏನು ಹೇಳಬೇಕೆಂಬುದನ್ನು ತಿಳಿಯದೆ (ಮಾರ್ಕ 9:6), ಪೇತ್ರನು "ಸ್ವಾಮಿ ನಾವು ಇಲ್ಲೇ ಇರುವದು ಒಳ್ಳೆಯದು. ಅಪ್ಪಣೆಯಾದರೆ ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು; ನಿನಗೊಂದು, ಮೋಶೆಗೊಂದು, ಎಲೀಯನಿಗೊಂದು" ಎಂದು ವಿಚಾರವಿಲ್ಲದೆ ಮಾತನಾಡಿದನು (ಮತ್ತಾಯ 17:4). ಆತನು ಮಾತನಾಡುತ್ತಿದ್ದಂತೆಯೇ "ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ ಈತನು ಪ್ರೀಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು!" (ಮತ್ತಾಯ 17:5). ಆ ಧ್ವನಿಯು ಮಾತನಾಡಿದ ನಂತರ "ಫಕ್ಕನೆ ಅವರು ಸುತ್ತಲೂ ನೋಡಿದಾಗ ತಮ್ಮ ಸಂಗಡ ಯೇಸುವನ್ನೇ ಹೊರತು ಆಗಿನಿಂದ ಮತ್ತಾರನ್ನೂ ಕಾಣಲಿಲ್ಲ" (ಮಾರ್ಕ 9:8).

ಈ ದರ್ಶನವು ಶಿಷ್ಯರ ಪ್ರಯೋಜನಕ್ಕೋಸ್ಕರವಾಗಿಯೇ ಇತ್ತು: ಯೆರೂಸಲೇಮಿನಲ್ಲಿಯ ಆತನ ಬಾಕಿಯಿರುವ ಮರಣದ ಯೇಸುವಿನ ಮುನ್ನುಡಿಯುವಿಕೆಯು ದೃಢೀಕರಣವನ್ನು ಮತ್ತು ಪೇತ್ರನ ಅರಿಕೆಯನ್ನು ಇದು ದೃಢೀಕರಿಸುವುದಾಗಿದೆ. ಆತನು ಅವರಿಗೆ ಏನನ್ನು ಹೇಳು ತ್ತಾನೋ ಅದಕ್ಕೋಸ್ಕರ ಅವರು "ಆತನನ್ನು ಕೇಳಬೇಕೆಂದು" ಅಪೊಸ್ತಲರಿಗೆ ಇದು ಒತ್ತಿ ಹೇಳಲ್ಪಟ್ಟಿದೆ!

ಈ ಅಭೂತಪೂರ್ವ ಘಟನೆಯು ಸಹ ಯೇಸುವಿಗೆ ಪ್ರಯೋಜಕರವಾದುದ್ದು ಆಯಿತು. ಹನ್ನೆರಡೂ ಜನರು ಆತನ ಮಹತ್ವವನ್ನು ಅರಿತುಕೊಂಡರು, ಆದರೆ ಮೋಶೆ ಮತ್ತು ಎಲಿಯರು ಇದನ್ನು ಮಾಡಿದರು. ಮನುಷ್ಯರು ಆತನನ್ನು ತಿರಸ್ಕರಿಸಬಹುದು, ಆದರೆ ದೇವರು ಹಾಗೆ ಮಾಡನು. ಕ್ರಿಸ್ತನ ದೀಕ್ಷಾಸ್ನಾನದ ಸಮಯದಲ್ಲಿ ದೇವರು ಪರಲೋಕದಿಂದ ಮಾತನಾಡಿದನು, ಮೂವತ್ತು ವರ್ಷದ ಸೇವೆಗಾಗಿ ಒಪ್ಪಿಕೊಳ್ಳುವಿಕೆಗಾಗಿ ಮುದ್ರೆಹಾಕಿದನು. ಈಗ ಆತನ ವೈಯಕ್ತಿಕ ಸೇವೆಗಾಗಿ ಪ್ರಮಾಣಿಕರಿಸುತ್ತಿದ್ದಾನೆ. ಬರಲಿರುವ ಆತನ ದಿವ್ಯತೆಗಾಗಿ ಪರಲೋಕವು ಹೀಗೆ ಯೇಸುವನ್ನು ಸಿದ್ಧಪಡಿಸುತ್ತಿದೆ.

**ಬೆಟ್ಟದ ಕೆಳಗೆ: ಶಿಷ್ಯರು ದಂಗಾಗುವಿಕೆ**

"ಅವರು ಬೆಟ್ಟದಿಂದ ಇಳಿದುಬರುತ್ತಿರುವಾಗ ಯೇಸು ಈಗ ಕಂಡ ದರ್ಶನವನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎಬ್ಬಿಸಲ್ಪಡುವ ತನಕ ಯಾರಿಗೂ ಹೇಳ ಬೇಡಿರೆಂದು ಖಂಡಿತವಾಗಿ ಹೇಳಿದನು" (ಮತ್ತಾಯ 17:9). ತನ್ನ ಮರಣಕ್ಕೆ ಸಂಭಂದಿಸಿದ ತನ್ನ ಉದ್ಘೋಷಣೆಯಲ್ಲಿ ಕ್ರಿಸ್ತನು ತನ್ನ ಪುನರುತ್ಥಾನವನ್ನೂ ಸಹ ಸೂಚಿಸಿದನು (ಮತ್ತಾಯ 16:21), ಆದರೆ ಈಗ ಆತನು ಆ ಘಟನೆಯನ್ನು ಸಮಯದ ಸೂಚನೆಗಾಗಿ ಬಳಸುತ್ತಿದ್ದಾನೆ. ಇನ್ನೊಂದು ಸಾರಿ, ಆತನ ಶಿಷ್ಯರು ದಿಗಿಲುಗೊಂಡರು: "ಸತ್ತು ಜೀವಿತನಾಗಿ ಏಳುವುದಂದರೇನು" ಎಂದು ಅವರು ಚರ್ಚಿಸತೊಡಗಿದರು (ಮಾರ್ಕ 9:10). ಸಾಮ್ಯದಲ್ಲಿ ಕರ್ತನು ಹಲವು ಬಾರಿ ಮಾತನಾಡಿದ್ದಂತೆ (ಮತ್ತಾಯ 13:35), ಆತನು ಉಪಮಾನಾತ್ಮಕ ಭಾಷೆಯನ್ನು ಬಳಸುತ್ತಿದ್ದಾನೆಂದು ಅವರು ಸ್ಪಷ್ಟವಾಗಿ ಯೋಚಿಸಿದರು.

"ಸತ್ತು ಜೀವಿತನಾಗಿ ಏಳುವುದರ" ಅರ್ಥವನ್ನು ವಿವರಿಸಲು ಅವರು ಯೇಸುವಿಗೆ ಕೇಳಲಿಲ್ಲ, ಆದರೆ ಅವರನ್ನು ತೊಂದರೆಕೊಡುತ್ತಿದ್ದ ಕೆಲವೊಂದರ ಬಗೆಗೆ ಅವರು ಕೇಳುತ್ತಿದ್ದರು. ಅವರು ಈಗ ಮಾತ್ರ ಎಲಿಯನನ್ನು ನೋಡಿದ್ದರು, ಆದರೆ ಆ ಪ್ರವಾದಿಯು ಕ್ರಿಸ್ತನ ಸೇವೆಯ ಕೊನೆಯು ಹತ್ತಿರವಾಯಿತು ಎಂದು ಸೂಚಿಸುತ್ತಿದ್ದಾನೆ. ಅವರು "ಎಲಿಯನು *ಮೊದಲು* ಬರುವದು ಅಗತ್ಯವಾಗಿದೆ ಎಂದು ಶಾಸ್ತ್ರಿಗಳು ಹೇಳುತ್ತಾರಲ್ಲ ..." ಎಂದು ಕೇಳಿ ದರು (ಮತ್ತಾಯ 17:10; ಒತ್ತಿ ಹೇಳಿದ್ದು ನನ್ನದು).

ಎಲೀಯನು ಸ್ನಾನಿಕನಾದ ಯೋಹಾನನ ಸೇವೆಯನ್ನು ಪರಿಪೂರ್ಣವಾಗಿಸುವದ ಕ್ಕೋಸ್ಕರ ಬರುವನು ಎಂಬುದರ ಬಗೆಗಿನ ಪ್ರವಾದನೆಯ ಬಗೆಗೆ ಕ್ರಿಸ್ತನು ಇತ್ತೀಚೆಗೆ ಒತ್ತಿ ಹೇಳಿದ್ದನು (ಮತ್ತಾಯ 11:14; ಲೂಕ 1:17), ಆದರೆ ಬೆಟ್ಟದ ಮೇಲೆ ಎಲೀಯನ ಕಾಣಿಸಿಕೊಳ್ಳುವಿಕೆಯು ಅಪೊಸ್ತಲರನ್ನು ಗಲಿಬಿಲಿಗೊಳಿಸಿತು. ಎಲೀಯನು ಈಗಾಗಲೇ ಬಂದಿದ್ದಾನೆ ಎಂದು ಯೇಸು ತಿರಿಗಿ ವಿವರಿಸಿದನು (ಮತ್ತಾಯ 17:12). "ಆಗ ಸ್ನಾನಿಕನಾದ ಯೋಹಾನನ ವಿಷಯವಾಗಿ ತಮಗೆ ಈ ಮಾತನ್ನು ಹೇಳಿದನೆಂದು ಶಿಷ್ಯರು ಹೇಳಿಕೊಂಡರು" (ಮತ್ತಾಯ 17:13).

## ಮುಕ್ತಾಯ

ಕ್ರಿಸ್ತನು ಬೆಟ್ಟದ ತಳಕ್ಕೆ ತಲುಪಿದಾಗ, ಆತನು ಒಮ್ಮಲೆ ಇನ್ನೊಂದು ಭಾವನಾತ್ಮಕ ಕಣಿವೆಯಲ್ಲಿ ಕಂಡುಕೊಂಡನು ಅದು ದೆವ್ವಹಿಡಿದ ಒಬ್ಬನನ್ನು ವಾಸಿಮಾಡುವಲ್ಲಿ ಆತನ ಶಿಷ್ಯರ ವಿಫಲತೆಯ ತುಫಾಕಿಯೇ ಆಗಿತ್ತು (ಮತ್ತಾಯ 17:14-16) ಆದರೆ ಅದನ್ನು ನಾವು ನಮ್ಮ ಮುಂದಿನ ಪಾಠದಲ್ಲಿ ನೋಡೋಣ. ಈ ಸಮಯದಲ್ಲಿ, ನಮ್ಮ ಪ್ರಸ್ತುತ ಅಧ್ಯಯನದಿಂದ ಎರಡು ಅನ್ವಯಗಳನ್ನು ಮಾಡಿಕೊಳ್ಳುವಾ: ಮೊದಲನೆಯದು, ನಾವುಭಾವನೆಗಳ ಉನ್ನತ ವಾಗುವಿಕೆ ಮತ್ತು ಕೆಳಕ್ಕೆ ಬರುವಿಕೆಯೊಡನೆ ನಾವಿರುವಾಗ ಕರ್ತನು ಅರಿತುಕೊಳ್ಳುತ್ತಾನೆ. ಯೇಸು ಅನುಭವಿಸಿದ ವಿವಿಧ ಭಾವನೆಗಳನ್ನು ನಾವು ನಿರಾಶರಾಗಿದ್ದಾಗಲೂ, ಆತನು ನಮ್ಮನು ಇನ್ನೂ ಪ್ರೀತಿಸುವವನಾಗಿದ್ದಾನೆ. ಅವರಲ್ಲಿ ಒಬ್ಬನು "ಆತನು ಪರಿಪೂರ್ಣವಾಗಿ ಅವರನ್ನು ಪ್ರೀತಿಸಿದನು" ಎಂದು ನಂತರದಲ್ಲಿ ಬರೆಯುತ್ತಾನೆ (ಯೋಹಾನ 13:1). ಅದು ನಿಮ್ಮನ್ನು ಸಮಾಧಾನಪಡಿಸದೆ ಇದ್ದರೆ ಮತ್ತು ನಿಮ್ಮ ಮನದಲ್ಲಿ ಶಾಂತಿ ಇರದಿದ್ದರೆ, ಏನೂ ಆಗದು.

ಟಿಪ್ಪಣಿಗಳು

[1]ಹೊರಹೋಗುವಿಕೆಯ ಈ ಸರಣಿಗಳು ಯಾಕೆ ಆರಂಭವಾದವು ಎಂಬುದನ್ನು ನೀವು ಪುನರಾವರ್ತಿಸಬಹುದು (ಈ ಪುಸ್ತಕದ ಆರಂಭದಲ್ಲಿನ "ಯಶಸ್ಸಿನ ಆಪಾಯ" ಎಂಬ ಪಾಠವನ್ನು ಅಧ್ಯಯನ ಮಾಡಿರಿ). [2]ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಸೇವೆಯ ಆರಂಭದಲ್ಲಿ ಪ್ಯಾಲಿಸ್ಟೈನ್" ಎಂಬ ನಕಾಶೆಯನ್ನು ನೋಡಿರಿ. [3]ಸದ್ದುಕಾಯರ ಹಿನ್ನಲೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ಸಿಕ್ಕುವ "ಕ್ರಿಸ್ತನು ಬರಬೇಕಾದ ಜಗತ್ತು" ಎಂಬ ಪಾಠವನ್ನು ಓದಿರಿ. [4]"ಪ್ರಶ್ನೆಯ ದಿನಕ್ಕಾಗಿ" ಯೇಸುವಿನ ಸೇವೆಯ ಕೊನೆವಾರದಲ್ಲಿ ಫರಿಸಾಯರೂ ಹಾಗೂ ಸದ್ದುಕಾಯರೂ ಸೇರಿಕೊಂಡರು ಎಂಬುದನ್ನು ನಾವು ನೋಡುತ್ತೇವೆ. [5]"ರಾಜಕೀಯ ವಿಚಿತ್ರ ಜೊತೆಗಾರರನ್ನು ಮಾಡುತ್ತದೆ" ನನ್ನ ಭಾಗದಲ್ಲಿ ಇದೊಂದು ಹಳೆಯ ಹೇಳಿಕೆಯಾಗಿದೆ. ಒಂದೇ ತರದ ಕಾರಣವು ಅಸಾಧಾರಣವು ಜೊತೆಗಾರರನ್ನು ಒಟ್ಟಾಗಿ ತರುವುದಕ್ಕೆ ಕಾರಣವಾಗುತ್ತದೆ. [6]ಮೂಲ ಗ್ರೀಕ್ ವೇದಭಾಗದ ಅಕ್ಷರ ಸಹ ಅರ್ಥವು "ಪರಲೋಕದಿಂದ ಹೊರಗೆ" ಎಂದಿದೆ. ಇದು "ದೇವರಿಂದ" ಎಂಬುದರ ಬದಲು "ಆಕಾಶದ ಹೊರಗೆ" ಎಂದು ಭಾಷಾಂತರವಾಗಿದೆ. [7]ಇದರ ಮೇಲಿನ ಹಿಂದಿನ ಚರ್ಚೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ಸಿಕ್ಕುವ "ಒಂದು ಗಡಿಬಿಡಿಯ ದಿನ" ಎಂಬ ಪಾಠವನ್ನು ಓದಿರಿ. [8]There is an old saying: "A red sky at night is the shepherd's delight; a red sky in the morning is the shepherd's warning" (William Barclay, *The Gospel of Matthew,* rev. ed., vol. 2, The Daily Study Bible Series [Philadelphia: Westminster Press, 1975], 129). [9]"ಇಂದು ಕಾಣುವ ಸೂಚನೆಗಳು" ಎಂಬ ಪದವು ಸೂಚಕಕಾರ್ಯಗಳನ್ನು ಸೂಚಿಸುವವು ಆಗಿದ್ದು ಅದು ಯೇಸು ಅದನ್ನು ಮಾಡಿದ್ದು ಎಂದು ಸಾಬೀತುಪಡಿಸಿದ್ದ ಆತನು ಯೆಹೂದ್ಯರು ಶತಮಾನಗಳಿಂದ ನಿರೀಕ್ಷಿಸುವ "ಸಮಯ" ಎಂದು ಸೂಚಿತವಾಗಿದೆ: ಸೂಚಕಕಾರ್ಯಗಳ ಕೆಲವರ ಪ್ರಕಾರ ಇದು ಎರಡನೆಯ ಬರೋಣದ ಕುರಿತಾಗಿದೆ ಎನ್ನುವದು ತಪ್ಪು. [10]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ಸಿಕ್ಕುವ "ಯೋನನ ಸೂಚಕ ಕಾರ್ಯಗಳು" ಎಂಬುದನ್ನು ಓದಿರಿ.

[11]ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಸೇವೆಯ ಆರಂಭದಲ್ಲಿ ಪ್ಯಾಲಿಸ್ಟೈನ್" ಎಂಬ ನಕಾಶೆಯನ್ನು ನೋಡಿರಿ. [12]"ಸದ್ದುಕಾಯರ ಹುಳಿಹಿಟ್ಟು" ಮತ್ತು "ಹೆರೋದನ ಹುಳಿಹಿಟ್ಟು" ಎಂಬ ಪದಗುಚ್ಛಗಳು ಅಂತರ್ ಬದಲಾವಣೆಯೊಂದಿಗೆ ಬಳಕೆಯಾಗುತ್ತವೆ, ಆದರೆ ಬೇರೆಯಾಗಿ ಚರ್ಚಿಸಲ್ಪಟ್ಟಾಗ ಅವು ಉಪಯೋಗ ವಾಗುತ್ತವೆ. [13]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ಸಿಕ್ಕುವ "ಕೂಡುತ್ತಿರುವ ಬಿರುಗಾಳಿ" ಎಂಬ ಪಾಠವನ್ನು ನೋಡಿರಿ. [14]ಈ ಹಿಂದಿನ ಪುಸ್ತಕದಲ್ಲಿ ಸಿಕ್ಕುವ "ಆತನು ಸಾಮ್ಯದ ಮೂಲಕ" ಅನೇಕ ಸಂಗತಿಗಳನ್ನು ಮಾತನಾಡಿದನು ಎಂಬ ಪಾಠವನ್ನು ಪುನರಾವರ್ತಿಸಿರಿ. [15]ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಸೇವೆಯ ಆರಂಭದಲ್ಲಿ ಪ್ಯಾಲಿಸ್ಟೇನ್" ಎಂಬ ನಕಾಶೆಯನ್ನು ನೋಡಿರಿ. [16]ಕರುಣೆ ಎಂಬ ಪದವು ಅನುಕಂಪ ಎಂಬ ಪದಕ್ಕೆ ಸಮಾನವಾದದ್ದು ಆಗಿದೆ, ಆದರೆ ಬಲವಾ ದುದ್ದು ಆಗಿದೆ. ಅನುಕಂಪದಿಂದ ಇರುವದು ಒಂದು ಸಂಗತಿಯನ್ನು "ಅನುಭವಿಸುವದು" ಆದರೆ ಕರುಣೆಯು ಒಬ್ಬ ವ್ಯಕ್ತಿಯಲ್ಲಿ ಅನುಭವಿಸುವದು ಆಗಿದ್ದು ಅದು ಅವ್ಯಕ್ತಿಯನ್ನು ಆತನ ಸಮಸ್ಯೆಯನ್ನು ಗುರುತಿಸುವದು ಆಗಿದೆ. [17]ಯೇಸು ಈ ಕುರುಡನನ್ನು ವಾಸಿಮಾಡಿದ್ದನ್ನು ಮಾರ್ಕನು ಮಾತ್ರ ಹೇಳುತ್ತಾನೆ. ಇದು ಎರಡು ಅದ್ಭುತ ಕಾರ್ಯಗಳಲ್ಲಿ ಮಾರ್ಕನಿಗೆ ಅಮೂಲ್ಯವಾದದ್ದು ಆಗಿದೆ. ಇನ್ನೊಂದು ವಾಸಿಮಾಡುವಿಕೆಯು 7:31-37ರಲ್ಲಿನ ಮೂಕನನ್ನು ವಾಸಿಮಾಡಿದ್ದೇ ಆಗಿದೆ. [18]ಬೆತ್ಸಾಯಿದ ಯೂಲಿಸಸನ್ನು ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಸೇವೆಯ ಆರಂಭದಲ್ಲಿ ಪ್ಯಾಲಿಸ್ಟೈನ್" ಎಂಬ ನಕಾಶೆಯಲ್ಲಿ ಕಂಡು ಹಿಡಿಯಿರಿ. [19]ಇದು ಹಲವು ಬಾರಿ ಹೇಳಲ್ಪಟ್ಟದ್ದು ಆಗಿದ್ದು ಈ ಅದ್ಭುತಕಾರ್ಯವು "ಕ್ರಮೇಣ" ಆಗಿದೆ, ಆದರೆ ಆ ಪದದ ಬಳಕೆಯು ತಪ್ಪು ಗ್ರಹಿಯನ್ನು ಬಿಡಿಸುವುದಕ್ಕೆ ಆಗಿದೆ. ಕೇವಲ ಕೆಲವು ನಿಮಿಷಗಳಲ್ಲಿ ಇದರಲ್ಲಿ ಒಳಗೊಳ್ಳುತ್ತವೆ. ಇದು ಇಂದು ದಿನಗಳು ವಾರಗಳು, ಅಥವಾ ತಿಂಗಳುಗಳು ಬೇಕಾಗುವ "ಕ್ರಮೇಣ ಆಗುವ ಅದ್ಭುತಕಾರ್ಯಗಳಂತೆ" ಇಲ್ಲ. [20]ಪೌಲ ಅಭಿಪ್ರಾಯದಿಂದ ತೆಗೆದುಕೊಳ್ಳುವ ಮೂಲಕ ಸತ್ಯವನ್ನು ಕಂಡು ಹಿಡಿಯಲಾರಿರಿ ಎಂಬ ವಾಸ್ತವಕ್ಕೆ ಇದೊಂದು ಒಳ್ಳೆಯ ಉದಾಹರಣೆ.

[21]"ಒಳ್ಳೆಯ ಅರಿಕೆ" ಎಂಬ ಪದವು 1 ತಿಮೋಥೆ 6:12, 13 ರಲ್ಲಿ ಸಿಕ್ಕುವುದಾಗಿದೆ. [22]"Barjona" ಇದು ಇಬ್ರಿಯದಲ್ಲಿ "ಯೋನನ" ಎಂದಾಗಿದೆ. ಪೇತ್ರನ ತಂದೆಯ ಹೆಸರು ಯೋನ. [23]ಪೇತ್ರನು ಇತರರು ಪಡೆಯದ ವಿಶೇಷ ಸವಲತ್ತನ್ನು ಪಡೆದನು ಎಂದರ್ಥವಲ್ಲ. ಬದಲಾಗಿ ಯೇಸು ದೇವರು ಆದರೆ ಮನುಷ್ಯನಲ್ಲ ಎಂಬ ಸತ್ಯದ ಮೂಲದ ಬಗೆಗೆ ಇದೊಂದು ತಿಳುವಳಿಕೆಯಾಗಿದೆ. ದೇವರು ಪೇತ್ರನಿಗೆ ಪ್ರಕಟಿಸಿದ ರೀತಿಯು ಯೇಸುವಿನ ಜೀವಿತ ಮತ್ತು ಬೋಧನೆಯ ಮೂಲಕವೇ. [24]ಮತ್ತಾಯ 16:18, 19 ಪೇತ್ರನೇ ಅವರ ಮೊದಲ ಪೋಪ ಎಂಬುದಕ್ಕೆ ಆಧಾರವಾಗಿದೆ. [25]W. E. Vine, *The*

*Expanded Vine's Expository Dictionary of New Testament Words,* ed. John R. Kohlenberger III with James A. Swanson (Minneapolis: Bethany House Publishers, 1984), 974. ಕೆಲಸಾರಿ ಇದು ಯೇಸು ಎರಡು "ಬಂಡೆ" ಎಂಬ ಪದಕ್ಕೆ ಭಿನ್ನ ಪದಗಳಿಲ್ಲದ ಅರಮಾಯ ಭಾಷೆಯಲ್ಲಿ ಮಾತನಾಡಿದನು ಎಂಬುದನ್ನು ಒಳಗೊಂಡಿದೆ, ಆದರೆ ಇದು ಕೇವಲ ತರ್ಕವಾಗಿದೆ. ಆ ಘಟನೆಯು ಗ್ರೀಕ್‌ನಲ್ಲಿದೆ ಮತ್ತು ವಿಭಿನ್ನ ಪದಗಳಲ್ಲಿ ಬಳಿಕೆಯಾಗಿದೆ ಎಂದು ನಮಗೆ ಹೇಳುವಂಥ ವೇದಭಾಗಗಳೆಲ್ಲವನ್ನೂ ನಾವು ತಿಳಿದಿದ್ದೇವೆ. [26]ಕೆಲ ಪ್ರೊಟೆಸ್ಟಂಟ್ ವ್ಯಾಖ್ಯಾನಕಾರರು ಎಫೆಸ 2:20 ಕ್ರೈಸ್ತರು "ಅಪೊಸ್ತಲರ ಮತ್ತು ಪ್ರವಾದಿ ಗಳ ಅಡಿಪಾಯದ ಮೇಲೆಕಟ್ಟಲ್ಪಟ್ಟಿದ್ದರೆ, ಕ್ರಿಸ್ತನು ಮೂಲೆಗಲ್ಲು ಆಗಿದ್ದಾನೆ" ಎಂದು ಸೂಚಿಸುತ್ತಾರೆ. ಈ ಪರಿಚ್ಛೇದದಿಂದ ಪೇತ್ರನ ಮೇಲೆ ತನ್ನ ಸಭೆಯನ್ನು ಕಟ್ಟುವ ಬಗ್ಗೆ ಕ್ರಿಸ್ತನು ಮಾತನಾಡುತ್ತಿದ್ದನೆ - ಇದನ್ನು ಬಿಟ್ಟು ಇದು ಕೇವಲ ಪೇತ್ರನ ಮೇಲೆ ಮಾತ್ರ ಕಟ್ಟಲ್ಪಡಲಿಲ್ಲ, ಆದರೆ ಬದಲಾಗಿಲ್ಲ ಅಪೋಸ್ತಲರ ಮೇಲೆ ಕಟ್ಟಲ್ಪಟ್ಟಿತು. ಈ ಅಡ್ಡಿಯ ಅಪಾಯಕಾರಕವಾದದ್ದಲ್ಲ (ಪೇತ್ರನ ಮೇಲೆಯೇ ಮಾತ್ರ ಸಭೆಯು ಕಟ್ಟಲ್ಪಟ್ಟಿದೆ ಎಂದು ವಾದ ಮಾಡುವ ಕೆಥೋಲಿಕ್‌ಲಿಗೆ ಇದು ಉತ್ತರವಾಗಿದೆ), ಆದರೆ ಎರಡು ವ್ಯಾಖ್ಯಾನಗಳು ಈ ರೀತಿಯಲ್ಲಿ: (1) ಮತ್ತಾಯ 16ರಲ್ಲಿನ ಮತ್ತು ಎಫೆಸ 2ರಲ್ಲಿ ಅಂಶಗಳು ಭಿನ್ನವಾಗಿವೆ ಮತ್ತು ಗಲಬಿಲಿಗೊಳಿಸುವುದಿಲ್ಲ. (2) ಎಫೆಸ 2:20 ರಲ್ಲಿ ಕೂಡಾಸಭೆಯು ಅಪೋಸ್ತಲರ ಮತ್ತು ಪ್ರವಾದಿಗಳ ಬೋಧನೆಗಳ ಮೇಲೆ ಮತ್ತು ಯೇಸುವಿನಲ್ಲಿ ತಿದ್ದಿದ ಅವರ ಬೋಧನೆಯ ಮೇಲೆ ಕಟ್ಟಲ್ಪಟ್ಟಿದೆ ಎಂದಿದ್ದು ಅದರ ಅರ್ಥವು ಹಾಗೇ ಇರುವುದಾಗಿದೆ (ನೋಡಿ 1 ಕೊರಿಂಥ 2:2; ಗಲಾತ್ಯ 6:14). [27]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 412. [28]"ಸಭೆ" ಎಂಬುದಕ್ಕೆ ಭಾಷಾಂತರವಾದ ಗ್ರೀಕ್ ಪದವು ಹಳೆಯ ಒಡಂಬಡಿಕೆಯಲ್ಲಿ ವಿವಿಧ ಅರ್ಥಗಳೊಡನೆ ಬಳಸಲ್ಪಟ್ಟಿವೆ. [29]ಸಭೆಯ ಎಲ್ಲಾ ಸದಸ್ಯರೂ ಕೊಲ್ಲಲ್ಪಟ್ಟರೆ, ಇನ್ನೂ ಸಭೆಯು ನಾಶವಾಗುವುದಿಲ್ಲ, ಯಾಕೆಂದರೆ ಸಭೆಯ/ರಾಜ್ಯದ ಬೀಜವು ವಾಕ್ಯವಾಗಿದೆ (ಲೂಕ 8:11). ವಾಕ್ಯವು ನಾಶವಾಗದ್ದರಿಂದಲೇ (1 ಪೇತ್ರ 1:23-25), ಸಭೆಯು ಯಾವಾಗಲೂ ಅಸ್ತಿತ್ವದಲ್ಲಿರುವುದು ಆಗಿದೆ ಬೀಜದ ರೀತಿಯಲ್ಲಾದರೂ. [30]ಸಂಕೋಚದ ಕಾರಣದಿಂದ, ಹೆಚ್ಚಿನ ಭಾಷಾಂತರಕಾರರು ವಚನಗಳನ್ನು ಅಕ್ಷರ ಸಹ ಭಾಷಾಂತರಕ್ಕೆ ಪ್ರಯತ್ನಿಸುವುದಿಲ್ಲ ಅವರು ಕೇವಲ "shall be" ಅಥವಾ "will be" ಕಟ್ಟಲ್ಪಡವರು ಅಥವಾ ಬಿಚ್ಚಲ್ಪಡುವವರು ಎಂದು ಮಾಡುತ್ತಾರೆ (ನೋಡಿ KJV ಮತ್ತು NIV). NASBಯಲ್ಲಿ ಕೂಡಾ "shall be" ಯನ್ನು ಒಂದು ಬದಲಾರು ಪುನರಾವರ್ತನೆಯಲ್ಲಿ ಹೇಳಿದೆ, ಆದರೆ ಪುನರಾವರ್ತನೆಯು ಅಕ್ಷರಸಹ ಭಾಷಾಂತರಕ್ಕೆ ಮರಳಲಿ.

[31]ಸನ್ಹೆಡ್ರಿನದ ಸಂಕ್ಷಿಪ್ತ ಚರ್ಚೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ಸಿಕ್ಕುವ "ಕ್ರಿಸ್ತನು ಬರುವ ಜಗತ್ತಿನಲ್ಲಿ" ಎಂಬ ಪಾಠವನ್ನು ನೋಡಿರಿ. [32]"ಮೂರು ದಿನದ ನಂತರ" ಆತನು ಎದ್ದುಬರುವನು ಎಂದು ಕ್ರಿಸ್ತನು ಸೇರಿಸಿದನು, ಆದರೆ ಆ ಪದಗಳು ಅಪೋಸ್ತಲರಿಗೆ ಅರ್ಥರಹಿವಾಗಿದ್ದವು (ನೋಡಿ ಮಾರ್ಕ 9:10). [33]"ಸೈತಾನ" ಎಂಬುದರ ಅಕ್ಷರ ಸಹ ಅರ್ಥವ "ವೈರಿ" ಎಂದಾಗಿದೆ. [34]"ಅಡವಿಯಲ್ಲಿನ ಶೋಧನೆಯಲ್ಲಿನ ಒಂದು ಶಿಲುಬೆಯಿಲ್ಲದೆ ಅರಸನಾಗುವುದೇ ಆಗಿದೆ." [35]"ವಜ್ರಖಚಿತ ಕಿರೀಟ" ಅರಸರಿಂದ ಧರಿಸಲ್ಪಟ್ಟಿರುತ್ತಿತ್ತು. [36]ಮಾರ್ಕ 8:34ರ ಪ್ರಕಾರ ಆತನು ಹತ್ತಿರದಲ್ಲಿರುವವರಿಗೆ ಈ ಮಾತನ್ನು ಹೇಳಿದನು. [37]ಒಬ್ಬರಾದರೂ ಯುದನು ಮರಣಕ್ಕಿಂತ ಮುಂಚೆ ರಾಜ್ಯದ ಸಂಸ್ಥಾಪನೆಯನ್ನು ನೋಡಿದರೆ ಹೆಚ್ಚಾದವರು ಅದನ್ನು ಮಾಡಲ್ಲಿ. [38]ಯೇಸು ಇನ್ನೂ ತನ್ನ ರಾಜ್ಯದ ಸಂಸ್ಥಾಪನೆಯನ್ನು (premillennialists ರಂಥವರು) ಮಾಡಲಿಲ್ಲ ಎಂದು ನಂಬುವವರು ಮಾರ್ಕ 9:1ರ ಜೊತೆ ಹೋರಾಡುತ್ತಾರೆ. ಇದು ರೂಪಾಂತರದ ಬಗ್ಗೆ ಹೇಳುವದಾಗಿದೆ ಎಂಬುದು ಒಂದು ಪ್ರಖ್ಯಾತವಾದ "ತಂತ್ರ" ವಾಗಿದೆ. "ದೃಶ್ಯ ರಾಜ್ಯ ಸಂಸ್ಥಾಪಿತವಾಗಿರಲಿಲ್ಲ ಆದ್ದರಿಂದ ರೂಪಾಂತರದ ಈ ಅಭಿವ್ಯಕ್ತ ನಿಶ್ಚಿತವಾಗಿ ಸರಿ ಅಲ್ಲ" ಎಂದು ಈ ವಿವರಣೆಯನ್ನು J. W. McGarvey ಸೂಚಿಸುತ್ತಾರೆ (McGarvey and Pendleton, 417).